ಸಂಪುಟ 01 | ಸಂಚಿಕೆ 49 | ಮಂಗಳವಾರ 30 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ
ಮಾನ್ವಿ, ಅಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಶ್ರೀ ವೈಕುಂಠ ಏಕಾದಶಿ (Sri Vaikuntha Ekadashi) ಡಿಸೆಂಬರ್ 30, 2025 ರಂದು ಕರ್ನಾಟಕದಾದ್ಯಂತ, ವಿಶೇಷವಾಗಿ ಬೆಂಗಳೂರಿನ ಇಸ್ಕಾನ್ ದೇವಾಲಯಗಳಲ್ಲಿ ಮತ್ತು ಎಲ್ಲಾ ವಿಷ್ಣು ದೇವಾಲಯಗಳಲ್ಲಿ ವೈಕುಂಠ ಏಕಾದಶಿಯನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಮಹತ್ವ: ವಿಷ್ಣು ದೇವರಿಗೆ ಸಮರ್ಪಿತವಾದ ಈ ದಿನದಂದು, ವೈಕುಂಠದ (ಭಗವಾನ್ ವಿಷ್ಣುವಿನ ಆಧ್ಯಾತ್ಮಿಕ ನಿವಾಸ) ಹೆಬ್ಬಾಗಿಲು ತೆರೆದಿರುತ್ತದೆ ಎಂದು ನಂಬಲಾಗಿದೆ. ಭಕ್ತರು ಈ ದಿನ ಉಪವಾಸ ವ್ರತ ಆಚರಿಸಿ, ವಿಷ್ಣು ದೇವಾಲಯಗಳಲ್ಲಿ ನಿರ್ಮಿಸಲಾಗುವ ವಿಶೇಷ 'ವೈಕುಂಠ ದ್ವಾರ'ದ ಮೂಲಕ ಪ್ರವೇಶಿಸುತ್ತಾರೆ. ಹೀಗೆ ಮಾಡುವುದರಿಂದ ಮೋಕ್ಷ ಪ್ರಾಪ್ತಿಯಾಗುತ್ತದೆ ಎಂಬ ಧಾರ್ಮಿಕ ನಂಬಿಕೆಯಿದೆ. ಆಚರಣೆಗಳು: ಭಕ್ತರು ದೇವಾಲಯಗಳಿಗೆ ಭೇಟಿ ನೀಡುವುದು, ವಿಷ್ಣು ಸಹಸ್ರನಾಮ ಪಠಿಸುವುದು ಮತ್ತು ಭಗವಂತನ ನಾಮಸ್ಮರಣೆ ಮಾಡುವುದರಲ್ಲಿ ತೊಡಗುತ್ತಾರೆ.

## ಸುಭಾಷಿತ

ಕೋಪಗೊಳ್ಳುವುದಕ್ಕಿಂತ ಅಳುವುದು
ಉತ್ತಮ. ಕೋಪ ಇತರರನ್ನು
ನೋಯಿಸುತ್ತದೆ. ಅಳು ನಮ್ಮ
ಹೃದಯವನ್ನು ನಿರ್ಮಲಗೊಳಿಸುತ್ತದೆ.

-ಎರಡನೇ ಪೋಪ್ ಜಾನ್ ಪಾಲ್

# ಹಿಂದಿ ನಮ್ಮ ರಾಷ್ಟ್ರ ಭಾಷೆಯಲ್ಲ,ಬೇರೆ ಭಾಷೆ ಮಾತನಾಡುವವ ರೊಂದಿಗೆ ಕನ್ನಡದಲ್ಲೇ ಮಾತನಾಡಿ :ಸಿಎಂ ಸಿದ್ದರಾಮಯ್ಯ

ಬೆಂಗಳೂರು: ರಾಜ್ಯ ಸರ್ಕಾರ ಹಿಂದಿಯನ್ನು ವಿರೋಧಿಸುವುದಿಲ್ಲ. ಆದರೆ, ಹಿಂದಿ ನಮ್ಮ ರಾಷ್ಟ್ರ ಭಾಷೆ ಅಲ್ಲ. ಕನ್ನಡವೇ ಸಾರ್ವಭೌವ ಭಾಷೆ. ಬೇರೆ ಭಾಷೆ ಮಾತನಾಡುವವರೊಂದಿಗೆ ಕನ್ನಡದಲ್ಲೇ ಮಾತನಾಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನತೆಗೆ ತಿಳಿಸಿದ್ದಾರೆ. ವಿವಿಧ ಕನ್ನಡ ಸಂಘಟನೆಗಳು ಆಯೋಜಿಸಿದ್ದ ಜನ ರಾಜ್ಯೋತ್ಸವ -2025ರ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿಗಳು ಮಾತನಾಡಿದರು.

ಕರ್ನಾಟಕದಲ್ಲಿ ಕನ್ನಡದ ವಾತಾವರಣವನ್ನು ನಿರ್ಮಾಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ರಾಜ್ಯದಲ್ಲಿ ಕನ್ನಡ ಕಲಿಯದೆಯೇ ಬದುಕಬಹುದಾದ ವಾತಾವರಣವಿದೆ. ಕನ್ನಡ ಕಲಿಯಲೇಬೇಕಾದ ಅನಿವಾರ್ಯತೆ ಇಲ್ಲ. ಬೇರೆ ಭಾಷೆಯಲ್ಲಿ ಮಾತನಾಡುವವರೊಂದಿಗೆ ನಾವು ಕನ್ನಡದಲ್ಲಿಯೇ ಮಾತನಾಡಬೇಕು. ತಮಿಳುನಾಡು, ತೆಲಂಗಾಣ, ಕೇರಳ, ಮಹಾರಾಷ್ಟ್ರ ಹಾಗೂ ಆಂಧ್ರದಲ್ಲಿ ಅವರವರ ಭಾಷೆಯಲ್ಲಿಯೇ ಮಾತನಾಡುತ್ತಾರೆ. ಕನ್ನಡಿಗರು ಏಕೆ ಕನ್ನಡದಲ್ಲಿ ಮಾತನಾಡಬಾರದು? ಕನ್ನಡದಲ್ಲಿಯೇ ಮಾತನಾಡಬೇಕು. ಅನಿವಾರ್ಯವಾದರೆ ಬೇರೆ ಭಾಷೆ ಬಳಸಿ. ಯಾವ ಭಾಷೆ ಕಲಿತರೂ ಕನ್ನಡಿಗರಾಗಿಯೇ ಉಳಿಯಬೇಕು ಎಂದು ಹೇಳಿದರು. ಕನ್ನಡ ಭಾಷೆ, ನೆಲ, ಜಲ, ಗಡಿ ಇವುಗಳ ಬಗ್ಗೆ ಹೋರಾಟ ಮಾಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. "ಎಲ್ಲಾದರೂ ಇರು, ಎಂತಾದರೂ ಇರು, ಎಂದೆಂದಿಗೂ ಕನ್ನಡವಾಗಿರು" ಎಂದು ಕುವೆಂಪು ಹೇಳಿದ್ದಾರೆ.

1983 ರಲ್ಲಿ ಕನ್ನಡ ಕಾವಲು ಸಮಿತಿ




ಅಧ್ಯಕ್ಷನಾಗಿ ನೇಮಕಗೊಂಡು ಒಂದೂವರೆ ವರ್ಷ ಕಾರ್ಯನಿರ್ವಹಿಸಿದ್ದೆ, ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಕನ್ನಡ ಬೆರಳಚ್ಚು ಯಂತ್ರಗಳನ್ನು ಎಲ್ಲೆಡೆ ಕಳುಹಿಸಿದ್ದೆ. ಕನ್ನಡ ಆಡಳಿತ ಭಾಷೆಯಾಗಿದ್ದು, ಕನ್ನಡ ಬಳಕೆ ಅನಿವಾರ್ಯವಾಗಬೇಕೆಂದು ತೀರ್ಮಾನಿಸಿ ಈ ಕೆಲಸ ಮಾಡಿದೆ. ಯಾರೇ ನನ್ನೊಂದಿಗೆ ಆಂಗ್ಲ ಭಾಷೆಯಲ್ಲಿ ಮಾತನಾಡಿದರೂ ನಾನು ಕನ್ನಡದಲ್ಲಿಯೇ ಮಾತನಾಡಿಸುವುದು ಹಾಗೂ ಕನ್ನಡದಲ್ಲಿಯೇ ಸಹಿ ಮಾಡುವುದು ಮತ್ತು ಟಿಪ್ಪಣಿ ಬರೆಯುವುದು. ಹೊರರಾಜ್ಯಗಳಿಗೆ ಪತ್ರ ಬರೆಯುವಾಗ ಮಾತ್ರ ಆಂಗ್ಲ ಭಾಷೆ ಬಳಸಿದರೂ, ಕನ್ನಡ ನಾಡಿನಲ್ಲಿ ಕನ್ನಡವೇ ಸಾರ್ವಭೌಮ ಭಾಷೆ. ಪ್ರತಿ ಹಳ್ಳಿಯಲ್ಲಿಯೂ ಕನ್ನಡ ಶಾಲೆ ಇರಬೇಕು ಎಂದು ಬರಗೂರು ರಾಮಚಂದ್ರಪ್ಪ ಅವರು ಸಲಹೆ ನೀಡಿದ್ದು, ಗ್ರಾಮಗಳಲ್ಲಿ ಕನ್ನಡ ಶಾಲೆ ಇರಲೇಬೇಕು. ನಾನೂ ಕೂಡ ಕನ್ನಡ ಶಾಲೆ, ಕನ್ನಡ ಮಾಧ್ಯಮದ ಪರವಾಗಿ ಇರುವವನು. ಇತ್ತೀಚೆಗೆ ಆಂಗ್ಲ ಭಾಷೆಯ ವ್ಯಾಮೋಹ ಹೆಚ್ಚುತ್ತಿದೆ.

ಇದಕ್ಕೆ ಪೋಷಕರ ಸಹಾಯವೂ ಅಗತ್ಯ. ಪೋಷಕರ ಸಹಾಯವಿಲ್ಲದೆ ಹೋದರೆ ಕನ್ನಡ ಶಾಲೆಗಳು ಉಳಿದು, ಬೆಳೆಯುವುದು ಕಷ್ಟ. ಬರಗೂರು ರಾಮಚಂದ್ರಪ್ಪ ಅವರು ಹೇಳಿದಂತೆ ಕನ್ನಡ ಶಾಲೆಗಳ ಬಗ್ಗೆ ಕೂಡಲೇ ಒಂದು ಸಭೆ ಕರೆದು, ಅಲ್ಲಿನ ತೀರ್ಮಾನವನ್ನು ಜಾರಿಗೊಳಿಸಲಾಗುವುದು. ವೈಯಕ್ತಿಕವಾಗಿ ನಾನು ದ್ವಿಭಾಷಾ ನೀತಿಯ ಪರವಾಗಿದ್ದು, ಸರ್ಕಾರ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಿದೆ ಎಂದು ತಿಳಿಸಿದರು.

ರಾಜ್ಯ ಸರ್ಕಾರ ಹಿಂದಿಯನ್ನು ವಿರೋಧಿಸುವುದಿಲ್ಲ. ಆದರೆ, ಹಿಂದಿ ನಮ್ಮ ರಾಷ್ಟ್ರ ಭಾಷೆ ಅಲ್ಲ. ಕನ್ನಡವೇ ಸಾರ್ವಭೌವ ಭಾಷೆ. 1956 ರಲ್ಲಿ ಭಾಷಾವಾರು ಪ್ರಾಂತ್ಯ ವಿಂಗಡಣೆ ಆಗಿದೆ. 1973 ರಲ್ಲಿ ದೇವರಾಜ ಅರಸು ಅವರು ಮುಖ್ಯಮಂತ್ರಿ ಆಗಿದ್ದಾಗ ಕರ್ನಾಟಕ ಎಂದು ನಾಮಕರಣವಾಯಿತು. ಇದಾಗಿ 50 ವರ್ಷಗಳಾದರೂ ಬಿಜೆಪಿ ಸರ್ಕಾರ ಇದರ ಆಚರಣೆ ಮಾಡಲಿಲ್ಲ. ನಮ್ಮ ಸರ್ಕಾರ ಇದನ್ನು ಇಡೀ ರಾಜ್ಯದಲ್ಲಿ ಆಚರಣೆ ಮಾಡಿತು. ಇದರ ಪ್ರಯುಕ್ತ ವಿಧಾನಸೌಧದ ಆವರಣದಲ್ಲಿ ಭುವನೇಶ್ವರಿ ದೇವಿಯ ಪ್ರತಿಮೆ ಸ್ಥಾಪನೆ ಮಾಡಲಾಗಿದೆ. ಹೈದ್ರಾಬಾದ್ ಕರ್ನಾಟಕಕ್ಕೆ ಕಲ್ಯಾಣ ಕರ್ನಾಟಕ ಎಂದು ಮರು ನಾಮಕರಣವಾಗಿದ್ದು, 371ಜೆ ಕಾಯ್ದೆಯ ಜಾರಿಯಾಗಿದ್ದು ಸೋನಿಯಾ ಗಾಂಧಿಯವರ ನಾಯಕತ್ವದಲ್ಲಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ. ಕಲ್ಯಾಣ ಕರ್ನಾಟಕ ದಲ್ಲಿ ಶೇ.70 ಮೀಸಲಾತಿ ಹಾಗೂ ರಾಜ್ಯದಲ್ಲಿ ಶೇ.8 ಮೀಸಲಾತಿ ನೀಡುವ ಶಿಫಾರಸ್ಸನ್ನು ಯಥಾವತ್ತು ಜಾರಿ ಮಾಡಲಾಗಿದೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೊದಲ ವರ್ಷದಲ್ಲಿ ರೂ.3000 ಕೋಟಿ ಹಾಗೂ ಈಗ ರೂ.5000 ಕೋಟಿ ಅನುದಾನವನ್ನು ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ನೀಡಲಾಗಿದೆ. ಆರೋಗ್ಯ ಮತ್ತು ಶಿಕ್ಷಣದಲ್ಲಿ ಹಿಂದುಳಿದಿರುವ ಕಲ್ಯಾಣ ಕರ್ನಾಟಕದಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಹತ್ತಾರು ವರ್ಷಗಳಲ್ಲಿ ಪ್ರಾದೇಶಿಕ ತಾರತಮ್ಯ ನಿವಾರಣೆಯಾಗಲಿದೆ ಎಂಬ ನಂಬಿಕೆ ನಮಗಿದೆ. ಅನುದಾನ ಸೂಕ್ತ ರೀತಿಯಲ್ಲಿ ಬಳಕೆಯಾಗಬೇಕು.

## ಅಪ್ರೆಂಟಿಸ್ ತರಬೇತಿಯ ತಾತ್ಕಾಲಿಕ ಆಯ್ಕೆಪಟ್ಟಿಗೆ ಆಕ್ಷೇಪಣೆ ಆಹ್ವಾನ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಡಿಸೆಂಬರ್ 29 (ಕರ್ನಾಟಕ ವಾರ್ತೆ): ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪತ್ರಿಕೋದ್ಯಮ ಪದವೀಧರ-ರಿಗೆ ರಾಯಚೂರು ಜಿಲ್ಲೆಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಚೇರಿಯಲ್ಲಿ ಮಾಧ್ಯಮ ಚಟುವಟಿಕೆಗಳ ಕಾರ್ಯನಿರ್ವಹಣೆ ಕುರಿತು 12 ತಿಂಗಳ ಅವಧಿಯ ಅಪ್ರೆಂಟಿಸ್ ತರಬೇತಿಗೆ ಮೆರಿಟ್ ಆಧ-ಾರದ ಮೇಲೆ ಆಯ್ಕೆಯಾದ ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈ ಕಚೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಈ ಆಯ್ಕೆಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು 2026ರ ಜನವರಿ 3 ಕೊನೆಯ ದಿನವಾಗಿದೆ. ಜನವರಿ 3 ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಜನವರಿ 3ರೊಳಗೆ ಆಕ್ಷೇಪಣೆಗಳು ಬಾರದಿದ್ದಲ್ಲಿ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿನ ಅಭ್ಯರ್ಥಿಗಳನ್ನೇ ಅಂತಿಮ ಆಯ್ಕೆಪಟ್ಟಿಗೆ ಪರಿಗಣಿಸಲಾಗುವುದು ಎಂದು ರಾಯಚೂರು ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಯ ಪ್ರಕಟಣೆ ತಿಳಿಸಿದೆ.

## ಮಾನವಿ ಖಾಸಗಿ ಶಾಲಾ ಶಿಕ್ಷಣ ಸಂಸ್ಥೆಗಳ ಒಕ್ಕೂಟ ವತಿಯಿಂದ ಕುವೆಂಪು ಜನ್ಮದಿನಾಚರಣೆ ಹಾಗೂ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ



ನೈಜ್ಯ ದೆಸೆ ನ್ಯೂಸ್

ಮಾನ್ವಿ: ಡಿ. 29-ತಾಲೂಕಿನ ಸರ್ವೋದಯ ಶಿಕ್ಷಣ ಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಪದಗ್ರಹಣ ಕಾರ್ಯಕ್ರಮವು ಕುವೆಂಪು ಅವರ ಜನ್ಮದಿನಾಚರಣೆ ಪ್ರಯುಕ್ತ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡುವುದರ ಮುಖಾಂತರ ಆರಂಭವಾಯಿತು.

ಈ ಸಂದರ್ಭದಲ್ಲಿ ನೂತನವಾಗಿ ಆಯ್ಕೆಯಾದಂತಹ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರು ರಾಜ ಸುಭಾಷ್‌ಚಂದ್ರ ನಾಯಕ್ ಪ್ರಧಾನ ಕಾರ್ಯದರ್ಶಿ ರಾಜು ತಾಳಿಕೋಟೆ, ಸಹಕಾರ್ಯದರ್ಶಿ ಅಖಿಲೇಶ್ ಕುರುಡಿ, ಖಜಾಂಚಿ ಶರಣಬಸವ, ಉಪಾಧ್ಯಕ್ಷ ಭೀಮರಾಯ ಸೀತಾಮನಿ, ಶಶಿಕಲಾ ಪಾಟೀಲ್ ಎಂ.ಎ.ಎಚ್ ಮುಖೀಮ್, ಸಂಘಟನಾ ಕಾರ್ಯದರ್ಶಿ ಸಂದೀಪ್, ನಿಕಟಪೂರ್ವ ಅಧ್ಯಕ್ಷ ಎಚ್ ಶರ್ಪುದ್ದೀನ್ ಕಾನೂನು ಸಲಹೆಗಾರರಾದ ಲಕ್ಷ್ಮೀದೇವಿ, ಹಾಗೂ ಸರ್ವೋದಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಮನೋಜ್ ಕುಮಾರ್ ಮಿಶ್ರಾ ಕಾರ್ಯದರ್ಶಿಗಳು ಅನಿಲ್ ಕುಮಾರ ಎಚ್ ಉಪಸ್ಥಿತರಿದ್ದರು.

## ಸಹನಾ ಶಾಲೆಯಲ್ಲಿ ರಾಷ್ಟ್ರಕವಿ ಕುವೆಂಪುರವರ 120 ನೇ ಜನ್ಮದಿನಾಚರಣೆ

ನೈಜ್ಯ ದೆಸೆ ನ್ಯೂಸ್

ನಾಡು ಕಂಡ ಸರ್ವಶ್ರೇಷ್ಠ, ರಾಷ್ಟ್ರಕವಿ, ಜಗದಕವಿ ಕುವೆಂಪು ಅವರ 120ನೇ ಜನ್ಮದಿನಾಚರಣೆಯನ್ನು, ಮುದುಗಲ್ ಪಟ್ಟಣದ ಕಿಲ್ಲಾದಲ್ಲಿರುವ ಸಹನಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಇಂದು ಹಮ್ಮಿಕೊಳ್ಳಲಾಯಿತು.

ಕುವೆಂಪುರವರ ಭಾವಚಿತ್ರಕ್ಕೆ, ಶಾಲೆ ಶಿಕ್ಷಕಿಯರಾದ ಕವಿತಾ ಮತ್ತು ಪ್ರಿಯಾಂಕ ಪೂಜೆ ಸಲ್ಲಿಸುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳಾದ ಆದಪ್ಪ ಅವರು ಮಾತನಾಡಿ ಪರಿಸರ, ಕೃಷಿ, ಮಹಿಳೆ ಮೊದಲಾದ ಹಲವು ಆಯಾಮಗಳನ್ನು ಒಳಗೊಂಡ ಕಾದಂಬರಿ, ನಾಟಕ, ಶಿಶು ಸಾಹಿತ್ಯ,



ಕವನ ಸಂಕಲನ ಹೇಗೆ ಸಾಹಿತ್ಯದ ಎಲ್ಲಾ ನೆಲೆಗಳನ್ನು ಕುವೆಂಪು ರವರ ಕೃತಿಗಳಲ್ಲಿ ಕಾಣಬಹುದು ಎಂದು ತಿಳಿಸಿದರು.

ಶಾಲೆಯ ವಿದ್ಯಾರ್ಥಿನಿಯರಾದ ಸಹನಾ ಮತ್ತು ಸಿಂಚನ ಮಾತನಾಡಿ, ಕುವೆಂಪುರವರು ಮಹಾನ್ ಚೇತನ ಮತ್ತು ಕನ್ನಡಕ್ಕೆ "ಜ್ಞಾನಪೀಠ ಪ್ರಶಸ್ತಿ "ತಂದುಕೊಟ್ಟ ರಾಷ್ಟ್ರಕವಿ ಎಂದು ತಮ್ಮ ಭಾಷಣದಲ್ಲಿ ತಿಳಿಸಿದರು. ಕಾರ್ಯಕ್ರಮದಲ್ಲಿ ಶಾಲೆಯ ಶಿಕ್ಷಕಿಯರಾದ ಆಯಿಷಾ ಬೇಗಮ್, ನಿಲುಬಾಯಿ, ಅಸ್ಮ, ಹೀನಾ ಬೇಗಂ ಉಪಸ್ಥಿತರಿದ್ದರು ಮತ್ತು ಕಾರ್ಯಕ್ರಮವನ್ನು ಶಾಲೆಯ ಶಿಕ್ಷಕಿಂ-ಯಾದ ಕಾವೇರಿ ಅವರು ನಿರೂಪಿಸಿದರು.

## ಜವಳಗೆರೆ ಗ್ರಾಮದಲ್ಲಿ ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ ಅವರಿಗೆ ಗೌರವ ಸನ್ಮಾನ

ನೈಜ್ಯ ದೆಸೆ ನ್ಯೂಸ್

ಜವಳಗೆರೆ: ಡಿ 29 ಗ್ರಾಮದಲ್ಲಿ ಅಬಕಾರಿ ಸಚಿವ ಆರ್. ಬಿ. ತಿಮ್ಮಾಪುರ ಅವರಿಗೆ ಗೌರವ ಸನ್ಮಾನ ಕಾರ್ಯಕ್ರಮದ ನಿಮಿತ್ತ ರಾಯಚೂರಿಗೆ ಆಗಮಿಸಿ, ಸಿಂಧನೂರು ನಗರದ ಕಡೆಗೆ ಪ್ರಯಾಣ ಬೆಳೆಸುತ್ತಿದ್ದ ಕರ್ನಾಟಕ ಸರಕಾರದ ಅಬಕಾರಿ ಸಚಿವರಾದ ಆರ್. ಬಿ. ತಿಮ್ಮಾಪುರ ಅವರಿಗೆ ದಾರಿ ಮಧ್ಯದಲ್ಲಿ ಜವಳಗೆರೆ ಗ್ರಾಮ ಅಂಬೇಡ್ಕರ್ ಮೈದಾನದ ಹತ್ತಿರ ಭವ್ಯ ಸ್ವಾಗತ ಹಾಗೂ ಗೌರವ ಸನ್ಮಾನ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಶ್ರೀ ಆರೋಗ್ಯಪ್ಪ, ದಲಿತ ಸಂಘಟನೆಯ ಮುಖಂಡರಾದ ಜಾನಪ್ಪ, ದೊಡ್ಡಮನಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಅಯ್ಯಪ್ಪ ದೊಡ್ಡಮನಿ,



ರಮೇಶ್ ಮಾಸ್ಟರ್ , ರಮೇಶ್ ತಂದೆ ಯಮುನಪ್ಪ, ಪ್ರಸಾದ್, ಪುನೀತ್ ಸೇ-ರಿದಂತೆ ಇತರರು ಸಚಿವರಿಗೆ ಶಾಲು ಹಾರ ಹಾಕಿ ಗೌರವ ಸಮರ್ಪಿಸಿದರು. ಅದೇ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರು ಹಾಗೂ ದಲಿತ ನಾಯಕರಾದ ಬಾಲಸ್ವಾಮಿ ಕೊಡ್ಲಿ ಅವ-ರಿಗೂ ಗೌರವ ಸನ್ಮಾನ ಸಲ್ಲಿಸಿ, ಅವರ ಸಾಮಾಜಿಕ ಸೇವೆ ಹಾಗೂ ಸಂಘಟನಾ ಕಾರ್ಯವನ್ನು ಪ್ರಶಂಸಿಸಲಾಯಿತು.

# ಕಲಿಕಾ ಹಬ್ಬದಿಂದ ಮಕ್ಕಳ ಕಲಿಕಾ ಆಸಕ್ತಿ ಹೆಚ್ಚಿಸಲು ಸಾಧ್ಯ: ಬಿಇಓ ಸಾವಳಗಿ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಸರ್ಕಾರಿ ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡಿ ಅವರ ಸರ್ವಾಂಗೀಣ ಪ್ರಗತಿಗಾಗಿ ಸರ್ಕಾರ ಹಾಗೂ ಶಿಕ್ಷಣ ಇಲಾಖೆ ಸಾಕಷ್ಟು ಯೋಜನೆಗಳನ್ನು ತಂದಿದೆ ಇದನ್ನು ಪ್ರಭಾವಪೂರ್ಣವಾಗಿ ಅನುಷ್ಠಾನಗೊಳಿಸಲು ಶಿಕ್ಷಕರು ಇನ್ನೂ ಹೆಚ್ಚಿನ ಪ್ರಯತ್ನವನ್ನು ಮಾಡಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್. ಸಾವಳಗಿ ಹೇಳಿದರು.

ಪಟ್ಟಣದ ಆಶ್ರಯ ಬಡಾವಣೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಅವರಣದಲ್ಲಿ ಜಿಪಂ ವಿಜಯಪುರ, ತಾಪಂ ತಾಳಿಕೋಟಿ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವಿಜಯಪುರ, ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಮುದ್ದೇಬಿಹಾಳ, ಸಮೂಹ ಸಂಪನ್ಮೂಲ ಕೇಂದ್ರ ತಾಳಿಕೋಟಿ ಇವರ ಸಹಯೋಗದಲ್ಲಿ ಹಮ್ಮಿಕೊಂಡ ಕ್ಲಸ್ಟರ್ ಮಟ್ಟದ 2025- 26ನೇ ಸಾಲಿನ ಎಫ್




ಎಲ್ ಏನ್ ಆಧಾರಿತ ಕಲಿಕಾ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ವಿವಿಧ ಕಾರ್ಯಕ್ರಮಗಳ ಮೂಲಕ ಆಸಕ್ತಿಯನ್ನು ಸೃಷ್ಟಿಸಿ ಅವರಿಗೆ ಮೂಲಭೂತ ಸಾಕ್ಷರತೆ ಹಾಗೂ ಸಂಖ್ಯಾ ಜ್ಞಾನವನ್ನು ನೀಡಲು ಕಲಿಕಾ ಹಬ್ಬವನ್ನು ಹಮ್ಮಿಕೊಳ್ಳಲಾಗುತ್ತಿದೆ ಮಕ್ಕಳು ಇದರಲ್ಲಿ ಆಸಕ್ತಿಯಿಂದ ಭಾಗವಹಿಸಬೇಕು ಎಂದರು.

ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಡಾ.ಎಂ.ಎಂ.ಬೆಳಗಲ್ ಮಾತನಾಡಿ ಕಳೆದ 2 ವರ್ಷಗಳಿಂದ ಕಲಿಕಾ ಹಬ್ಬ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಇದರ ಮೂಲಕ ಎಫ್ ಎಲ್ ಏನ್ ಆಧಾ-ರಿತ ಚಟುವಟಿಕೆಗಳನ್ನು ಮಕ್ಕಳಲ್ಲಿ ಬೆಳಸಲು ಇಲಾಖೆ ಪ್ರಯತ್ನಿಸುತ್ತಿದೆ, ಇದು ಮಕ್ಕಳನ್ನು ಸಂತಸದಾಯಕವಾದ ಕ್ರಿಯಾಶೀಲತೆ ಎಡೆಗೆ ತೆಗೆದುಕೊಂಡು ಹೋಗುವ ಕಾರ್ಯಕ್ರಮವಾಗಿದೆ ಎಂದರು. ಕರವೇ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಜೈ ಭೀಮ ಮುತ್ತಗಿ ಮಾತನಾಡಿ ಇವತ್ತು ಶಿಕ್ಷಣ ಆರೋಗ್ಯ ದಂತಹ ಮಹತ್ವದ ಸೇವಾ ಕ್ಷೇತ್ರಗಳು ಬಂಡವಾಳ ಷಾಹಿಗಳ ಸ್ವತ್ತಾಗುತ್ತಿರುವುದು ನೋವಿನ ಸಂಗತಿ, ಶಿಕ್ಷಣ ಮತ್ತು ಆರೋಗ್ಯ ಸಮಾಜದ ಖಡು ಬಡವರಿಗೆ ಸರಳವಾಗಿ ಸಿಗುವಂತಾಗಬೇಕು.

ಈ ನಿಟ್ಟಿನಲ್ಲಿ ಎಲ್ಲರೂ ಪ್ರಯತ್ನಿಸಬೇಕಾಗಿದೆ ನಮ್ಮ ಸಂಘಟನೆ ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳೆಸಲು ಇಲಾಖೆಯೊಂದಿಗೆ ಎಲ್ಲ ರೀತಿಯ ಸಹಕಾರವನ್ನು ನೀಡಲು ಸದಾ ಸಿದ್ಧವಾಗಿದೆ ಎಂದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕ ಅಧ್ಯಕ್ಷ ಬಿ.ಟಿ. ವಜ್ಜಲ್, ಕ್ಷೇತ್ರ ಸಮನ್ವಯಾಧಿಕಾರಿ ಆರ್. ಬಿ.ದಮ್ಮೂರಮಠ ಮಾತನಾಡಿದರು. ಇದೇ ಸಂದರ್ಭದಲ್ಲಿ ರಾಷ್ಟ್ರಕವಿ ಜ್ಞಾನ ಪೀಠ ಪ್ರಶಸ್ತಿ ಪುರಸ್ಕೃತ ಕುವೆಂಪು ಅವರ ಜನ್ಮ ದಿನಾಚರಣೆ ನಿಮಿತ್ಯ ಅವರ ಭಾವಚಿತ್ರಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಶಿಕ್ಷಣ ಸಂಯೋಜಕ ಎಸ್ ಎಸ್ ಹಿರೇಮಠ, ಎಸ್ ಡಿ ಎಂ ಸಿ ಅಧ್ಯಕ್ಷ ದಸ್ತಗೀರ ಬಿ.ಆರ್.ಪಿ.ಕಾಶಿನಾಥ ಸಜ್ಜನ, ಮುಖ್ಯ ಗುರುಗಳಾದ ಎಂ.ಬಿ.ನಾಗೂರ, ಗುರುಮಾತೆ ಎಸ್‌ಎಸ್ ಹುನುಗುಂದ, ಬಿ.ಆರ್.ಸಿ.ರಾಜು ವಿಜಾಪುರ, ಬಾಲಾಜಿ ಸಿಂಗ್ ವಿಜಾಪುರ, ಶಿಕ್ಷಕಿ ಎಸ್.ಬಿ.ಹೂಗಾರ, ಎಸ್‌ಡಿಎಂಸಿ ಸದಸ್ಯ ರಫೀಕ ಚೋರಗಸ್ತಿ, ಅಲ್ತಾಫ್ ವಿಜಾಪುರ ಅಬೂಬಕರ್ ಲಾಹೋರಿ, ಶಿಕ್ಷಕ ಡಿ.ಜೆ.ಬಾಗೆವಾಡಿ,ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಿಕ್ಷಕ ಆರ್ ಎಂ ಕುಲಕರ್ಣಿ ಪ್ರಾರ್ಥಿಸಿದರು. ಸಿ ಆರ್ ಸಿ ರಾಜು ವಿಜಾಪುರ ಸ್ವಾಗತಿಸಿದರು. ಹಿರಿಯ ಶಿಕ್ಷಕಿ ಎಂ ಬಿ ಮೈಲೇಶ್ವರ ನಿರೂಪಿಸಿ ವಂದಿಸಿದರು.

## ಸಾಹಿತ್ಯ ಸಿಂಚನ

ಗುಪ್ತಯಾನದೊಳಗಿನ ಸುಪ್ತಗಾನ.!

ಯಾವ ಮುರುಳಿಯ ಮೇಲೆ ಯಾರ ಬೆರಳೋ?
ಯಾವ ಕೊಳಲಿಗೆ ಯಾರ ಕೊರಳಿನ ಉಸಿರೋ?
ಯಾವ ಚಿಪ್ಪಿನೊಳಗೆ ಯಾವ ಮಳೆಹನಿಯೋ?
ಯಾವ ಹಾರಕೆ ಯಾವ ಚಿಪ್ಪಿನೊಳಗಣ ಮುತ್ತೋ?

ಯಾವ ದೋಣಿಗೆ ಅದ್ಯಾವ ಮರದ ಹುಟ್ಟೋ?
ಯಾವ ತೀರಕೆ ಯಾವ ದೋಣಿಯ ನಂಟೋ?
ಯಾವ ದುಂಬಿಗ್ಯಾವ ಸುಮದೊಡಲ ಮಧುವೋ?
ಯಾವ ಕುಸುಮಕೆ ಆವ ಭೃಂಗವದು ಬಂಧುವೋ?

ಯಾವ ಕೋಗಿಲೆಗೆ ಯಾವ ಮಾಮರದ
ಖನಿಯೋ?
ಯಾವ ತಳಿರಿಗೆ ಯಾವ ಕೋಗಿಲೆಯ ಇನಿಯೋ?
ಯಾವ ನವಿಲಿಗೆ ಯಾವ ಮೋಡದ ಸ್ಮರಣೆಯೋ?
ಯಾವ ಮೋಡಕೆ ಯಾವ ಗಿರಿಯ
ಘರ್ಷಣೆಯೋ?

ಯಾವ ಹತ್ತಿಬತ್ತಿಗೆ ಅದ್ಯಾವ ತೈಲದ ಆಸರೆಯೋ?
ಯಾವ ಹಣತೆ ಯಾರ್ಯಾರ ಮನೆಯ
ಕೈಸೆರೆಯೋ?
ಯಾವ ಕುಸುಮಗಳು ಯಾವ ಗುಡಿಗೆ
ಮಾಲೆಯೋ?
ಯಾವ ಗುಡಿಯೊಳಗಣ ಶಿಲ್ಪದಿ ಯಾವ
ಶಿಲೆಯೋ?

ಯಾವ ಒಡಲಿಗೆ ಯಾವ ಮಡಿಲ ಸಾಂಗತ್ಯವೋ?
ಯಾವ ಮಡಿಲಿಗೆ ಯಾರ ಲಾಲಿಯ ಸಾರಥ್ಯವೋ?
ಯಾವ ಘಳಿಗೆಗೆ ಯಾರ ಭಾವಸಿರಿ ಸಾಮಿಪ್ಯವೋ
ಯಾವ ಕ್ಷಣದಲಿ ಯಾರ ಜೀವಝರಿ
ಸಾನಿಧ್ಯವೋ?

ಯಾವ ಕವಲಿನಲಿ ಯಾವ ಭಾಗ್ಯದ ವ್ಯಾಪ್ತಿಯೋ?
ಯಾವ ಮೆಟ್ಟಿಲಲಿ ಯಾವ ಋಣದ ಪ್ರಾಪ್ತಿಯೋ?
ಯಾವ ಕನಸಿಗೆ ಯಾವ ಮನಸ್ಫೂರ್ತಿ
ದೀಪ್ತಿಯೋ?
ಯಾವ ವರ್ಚಸ್ಸಿಗೆ ಯಾವ ತೇಜಸ್ಸಿನ
ಸಂಯುಕ್ತಿಯೋ?


ಯಾವ ಮಾಯೆಗಳ ಲೀಲಾಜಾಲವೋ ಕ್ಷಣ-
ಕ್ಷಣಕು? ಯಾವ ಅನೂಹ್ಯಗಳ ಬಂಧಮಾಲೆಯೋ
ಕಣಕಣಕು? ಯಾವ ವಿಸ್ಮಯ ಮೋಡಿಗಳ
ಶೃಂಖಲೆಯೀ ಬದುಕು?
ಯಾವ ಅದೃಶ್ಯ ಗಾರುಡಿಯ ಜ್ವಾಲೆಯೀ ನಿತ್ಯ
ಬೆಳಕು?

ಎ.ಎನ್.ರಮೇಶ್.ಗುಬ್ಬಿ

## ಯರಗೇರಾದ ಶ್ರೀ ದರ್ಗಾ ಹಜರತ್ ಬಡೇಸಾಹೇಬ್ ಉರುಸಿನಲ್ಲಿ ಶಾಸಕರು ಭಾಗಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 29 (ಕರ್ನಾಟಕ ವಾರ್ತೆ): ರಾಯಚೂರು ಗ್ರಾಮೀಣ ಕ್ಷೇತ್ರ ವ್ಯಾಪ್ತಿಯ ಯರಗೇರಾ ಗ್ರಾಮದಲ್ಲಿ ಸರ್ವಧರ್ಮ ಭಾವೈಕ್ಯತೆಯ ಸಂಕೇತವಾದ ಶ್ರೀ ದರ್ಗಾ ಹಜರತ್ ಬಡೇಸಾಹೇಬ್ ಉರುಸಿನಲ್ಲಿ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಶಾಸಕರಾದ ಬಸನಗೌಡ ದದ್ದಲ್ ಅವರು ಭಾಗವಹಿಸಿ ಆಶೀರ್ವಾದ ಪಡೆದರು.**



ಈ ಸಂಧರ್ಭದಲ್ಲಿ ಊರಿನ ಹಿರಿಯ ಮುಖಂಡರು, ಸುತ್ತಲಿನ ಗ್ರಾಮಗಳ ಮುಖಂಡರು, ಗ್ರಾಮ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಗ್ರಾಮಸ್ಥರು ಹಾಗೂ ಭಕ್ತಾಧಿಗಳು ಉಪಸ್ಥಿತರಿದ್ದರು.

# ಸನ್ ರೈಸ್ ಕಾಲೇಜಿನಲ್ಲಿ ನಾಯಿ ಕಚು ಹಾವು ಕಚ್ಚು ಹಾಗೂ ಡೆಂಗ್ಯೂ ಕುರಿತು ಜಾಗೃತಿ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಿ 29 ತಾಲ್ಲೂಕು ಆರೋಗ್ಯ ಕಚೇರಿಯ ಮಾರ್ಗದರ್ಶನದಲ್ಲಿ ಸನ್ ರೈಸ್ ಡಿ ಫಾರ್ಮಸಿ, ನರ್ಸಿಂಗ್, ಪ್ಯಾರಾಮೆಡಿಕಲ್ ಕಾಲೇಜಿನಲ್ಲಿ ನಾಯಿ ಕಚ್ಚು ಮತ್ತು ಹಾವು ಕಚ್ಚು ತಡೆ ಹಾಗೂ ಚಿಕಿತ್ಸೆ ಕುರಿತು ಜಾಗೃತಿ ಕಾರ್ಯಕ್ರಮ ಯಶಸ್ವಿಯಾಗಿ ಆಯೋಜಿಸಲಾಯಿತು.**

ಈ ಜಾಗೃತಿ ಉಪನ್ಯಾಸವನ್ನು ಶ್ರೀ ನಿಖಿಲ್ ಮಹಾಮಾರಿ ತಜ್ಞರು, ತಾಲ್ಲೂಕು ಆರೋಗ್ಯ ಕಚೇರಿ ಸಿಂಧನೂರು ಅವರು ನಡೆಸಿಕೊಟ್ಟರು. ಉಪನ್ಯಾಸದಲ್ಲಿ ಅವರು ನಾಯಿ ಕಚ್ಚು ಹಾಗೂ ಹಾವು ಕಚ್ಚಿನ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ತಕ್ಷಣದ ಪ್ರಥಮ ಚಿಕಿತ್ಸೆ, ತಪ್ಪಿಸಬೇಕಾದ ಅನ್ವೈಜ್ಞಾನಿಕ ಪದ್ಧತಿಗಳು, ಸಮಯಕ್ಕೆ ಸರಿಯಾಗಿ ಸಮೀಪದ ಸರ್ಕಾರಿ ಆರೋಗ್ಯ ಕೇಂದ್ರಕ್ಕೆ ತೆರಳುವ ಅಗತ್ಯತೆ ಮತ್ತು ಲಸಿಕೆ/ಆ?ಯಂಟಿ ವೆನಮ್ ಚಿಕಿತ್ಸೆಯ ಮಹತ್ವವನ್ನು ವಿವರಿಸಿದರು. ಸಾರ್ವಜನಿಕರು ಭಯಪಡದೇ, ಜಾಗೃತಿಯಿಂದ ಸರಿಯಾದ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಅದೇ ಕಾರ್ಯಕ್ರಮದಲ್ಲಿ ಡೆಂಗ್ಯೂ ಜಾಗೃತಿ ಉಪನ್ಯಾಸವನ್ನು ಅಬ್ದುಲ್ ರಹಿಮಾನ್ ಹಣಗಿ ಅವರು ನೀಡಿದರು. ಡೆಂಗ್ಯೂ ರೋಗದ







ಹರಡುವ ವಿಧಾನ, ಲಕ್ಷಣಗಳು, ಅಪಾಯ ಸೂಚನೆಗಳು ಹಾಗೂ ತಡೆಗಟ್ಟುವ ಕ್ರಮಗಳ ಕುರಿತು ವಿವರಿಸಿ, ಮನೆಯ ಸುತ್ತಮುತ್ತ ನೀರು ನಿಲ್ಲದಂತೆ ನೋಡಿಕೊಳ್ಳುವುದು, ಸೊಳ್ಳೆ ಪರದೆ ಕಟ್ಟುವುದರ ಮೂಲಕ ತಡೆಯುವುದು ಹಾಗೂ ಜ್ವರ ಕಾಣಿಸಿಕೊಂಡ ಕೂಡಲೇ ಆರೋಗ್ಯ ಕೇಂದ್ರಕ್ಕೆ ವರದಿ ಮಾಡುವ ಅಗತ್ಯತೆಯನ್ನು ತಿಳಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಸ್ವಾಗತ ಹಾಗೂ ಪರಿಚಯವನ್ನು ಲಾಜರ್ ಸಿರಿಲ್ ಜಿ ಅವರು ನೀಡಿದರು.

ಸಮುದಾಯದ ಆರೋಗ್ಯ ರಕ್ಷಣೆಯಲ್ಲಿ ಇಂತಹ ಜಾಗೃತಿ ಕಾರ್ಯಕ್ರಮಗಳ ಪಾತ್ರ ಅತ್ಯಂತ ಮಹತ್ವದ್ದು ಎಂದು ಅವರು ತಿಳಿಸಿ, ಸಾರ್ವಜನಿಕರು ಆರೋಗ್ಯ ಇಲಾಖೆಯೊಂದಿಗೆ ಸಹಕರಿಸುವಂತೆ ಮನವಿ ಮಾಡಿದರು. ಈ ಜಾಗೃತಿ ಕಾರ್ಯಕ್ರಮವು ಸಾರ್ವಜನಿಕರಲ್ಲಿ ನಾಯಿ ಕಚ್ಚು, ಹಾವು ಕಚ್ಚು ಹಾಗೂ ಡೆಂಗ್ಯೂ ಕುರಿತು ಅರಿವು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿತು. ಕಾರ್ಯಕ್ರಮದಲ್ಲಿ ತಾಲೂಕ ಆರೋಗ್ಯ ಅಧಿಕಾರಿಗಳ ಕಚೇರಿಯ ಅಧಿಕಾರಿಗಳಾದಂತ ಶ್ರೀ ನಿಖಿಲ್ ಹೊಸಮನಿ ಎಂಡೊಮೊಲಜಿಸ್ಟ್ ರೋಗವಾಹಕ ಆಶ್ರಿತ ಕಾರ್ಯಕ್ರಮದ ಮೇಲ್ವಿಚಾರಕರು ಆದ ಶ್ರೀ ಹಣಗಿ ಮತ್ತು ಸನ್ ರೈಸ್ ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳಾದ ಇರ್ಷಾದ್ ಕೆ ಅತ್ತಾರ್ ಹಾಗೂ ಎಲ್ಲಾ ಉಪನ್ಯಾಸಕರುಗಳು, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಕುವೆಂಪು ಅವರ ಆದರ್ಶಗಳನ್ನು ಸ್ಮರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಸನ್ ರೈಸ್ ಕಾಲೇಜಿನಲ್ಲಿ ರಾಷ್ಟ್ರಕವಿ ಕುವೆಂಪು ಅವರ ಜನ್ಮ ದಿನಾಚರಣೆ



❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಿ 29 ನಾಡಿನ ರಾಷ್ಟ್ರಕವಿ ಕುವೆಂಪು ಅವರ ಜನ್ಮದಿನಾಚರಣೆಯನ್ನು ಸನ್ ರೈಸ್ ಗ್ರೂಪ್ ಆಫ್ ಇನ್ಸಿಟ್ಯೂಟ್ ಸಿಂಧನೂರಿನಲ್ಲಿ ಭಕ್ತಿಭಾವದಿಂದ ಹಾಗೂ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಕುವೆಂಪು ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಪೂಜೆ ಸಲ್ಲಿಸುವ ಮೂಲಕ ಗೌರವ ನಮನ ಸಲ್ಲಿಸಲಾಯಿತು.**

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸನ್ ರೈಸ್ ಗ್ರೂಪ್ ಆಫ್ ಇನ್ಸಿಟ್ಯೂಷನ್ ಅಧ್ಯಕ್ಷರಾದ ಶ್ರೀ ಇರ್ಫಾನ್ ಕೆ ಅತ್ತಾರ್ ಅವರು ವಹಿಸಿದ್ದರು. ಅವರು ಮಾತನಾಡಿ, ಕುವೆಂಪು ಅವರು ಸಾರಿದ ಮಾನವೀಯತೆ, ಸಮಾನತೆ, ನಾಡು?ನುಡಿ ಪ್ರೀತಿ ಮತ್ತು ವಿಶ್ವಮಾನವ ಸಂದೇಶಗಳು ಇಂದಿನ ವಿದ್ಯಾರ್ಥಿ ಸಮುದಾಯಕ್ಕೆ ದಾರಿದೀಪವಾಗಿವೆ ಎಂದು ಹೇಳಿದರು. ಸನ್ ರೈಸ್ ಗ್ರೂಪ್ ಆಫ್ ಇನ್ಸಿಟ್ಯೂಷನ್‌ನ ಕಾರ್ಯದರ್ಶಿಗಳು ಹಾಗೂ ಪ್ರಾಚಾರ್ಯರಾದ ಲಾಜರ್ ಸಿರಿಲ್ ಅವರು ಮಾತನಾಡಿ, ಕುವೆಂಪು ಅವರ ಸಾಹಿತ್ಯ ಮತ್ತು ಚಿಂತನೆಗಳು ಯುವಜನರಲ್ಲಿ ಮೌಲ್ಯಾಧಾರಿತ ಬದುಕು, ಸಾಮಾಜಿಕ ಜವಾಬ್ದಾರಿ ಹಾಗೂ ವೈಚಾರಿಕ ಚೈತನ್ಯವನ್ನು ಬೆಳೆಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಕುವೆಂಪು ಅವರ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಅವರು ಕರೆ ನೀಡಿದರು. ಕಾರ್ಯಕ್ರಮದಲ್ಲಿ ತಾಲೂಕ ಆರೋಗ್ಯ ಅಧಿಕಾರಿಗಳ ಕಚೇರಿಯ ಅಧಿಕಾರಿಗಳಾದಂತ ಶ್ರೀ ನಿಖಿಲ್ ಹೊಸಮನಿ ಎಂಡೊಮೊಲಜಿಸ್ಟ್ ರೋಗವಾಹಕ ಆಶ್ರಿತ ಕಾರ್ಯಕ್ರಮದ ಮೇಲ್ವಿಚಾರಕರು ಆದ ಅಬ್ದುಲ್ ರಹಿಮಾನ್ ಹಣಗಿ ಮತ್ತು ಸನ್ ರೈಸ್ ವಿದ್ಯಾಸಂಸ್ಥೆಯ ಕಾರ್ಯದರ್ಶಿಗಳಾದ ಇರ್ಷಾದ್ ಕೆ ಅತ್ತಾರ್ ಹಾಗೂ ಎಲ್ಲಾ ಉಪನ್ಯಾಸಕರುಗಳು, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದು, ಕುವೆಂಪು ಅವರ ಆದರ್ಶಗಳನ್ನು ಸ್ಮರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಸರ್ವಜ್ಞ ವಿದ್ಯಾಪೀಠ: ರಾಷ್ಟ್ರಕವಿ ಕುವೆಂಪುರವರ ಜನ್ಮದಿನಾಚರಣೆ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಸೋಮವಾರ ರಾಷ್ಟ್ರಕವಿ ಕುವೆಂಪು ರವರ ಜನ್ಮದಿನದ ಸ್ಮರಣಾರ್ಥವಾಗಿ ವಿಶ್ವ ಮಾನವ ದಿನವನ್ನು ಆಚರಿಸಲಾಯಿತು.**

ಕಾರ್ಯಕ್ರಮದಲ್ಲಿ ಸಂಸ್ಥಾಪಕ ಅಧ್ಯಕ್ಷ ಸಿದ್ದನಗೌಡ ಬ.ಮಂಗಳೂರ, ಮುಖ್ಯ ಗುರುಗಳಾದ ಸಂತೋಷ ಪವಾರ, ರಾಜು ಜವಳಗೇರಿ,ದೈಹಿಕ ಶಿಕ್ಷಕರಾದ ಬಸವರಾಜ ಚಳಗಿ,ಶಾಂತಗೌಡ ಬಿರಾದಾರ, ಸಂಜು ಕುಮಾರ





ರಾಠೋಡ, ಬಸವರಾಜ ಸವದತ್ತಿ, ರವಿಕುಮಾರ ಅನಧಿನಿ, ರವಿಕುಮಾರ ಮಲಾಬಾದಿ, ರಸೂಲಸಾ ತುರ್ಕಣಗೇರಿ, ಸಿದ್ದನಗೌಡ ಮುದ್ನೂರ, ಭೀಮನಗೌಡ ಸಾಸನೂರ, ಚೇತನ ನಾವದಗಿ, ಸವಿತಾ ಅಸ್ಕಿ,ಶಿವಲೀಲಾ ಚುಂಚೂರು, ರೂಪ ಪಾಟೀಲ, ಸಂಗಮೇಶ ಬಿರಾದಾರ, ಸಂಗೀತ ಬಿರಾದಾರ, ಮೇಘಾ ಪಾಟೀಲ, ಬೋರಮ್ಮ ಉಕ್ಕಲಿ, ಅನಿತಾ ಚೌದ್ರಿ, ಜ್ಯೋತಿ ಪೋಲಿಸ್ ಪಾಟೀಲ, ಶೃತಿ ಚೌದ್ರಿ,ರಾಜಬಿ ಬಿದರಿ, ನಾಗರತ್ನ ಮೈಲೇಶ್ವರ,ಶಿವಕುಮಾರ ಕುಂಬಾರ, ಹೀನಾ ಸನದಿ, ದೇವೇಂದ್ರ ಗುಳೆದ, ಮುಬಾರಕ ಬನ್ನಟ್ಟಿ,ದೇವರಾಜ ದೇಸಾಯಿ, ಸುಮಾ ಹಿರೇಮಠ, ಪ್ರತಿಭಾ ಗುಬ್ಬೇವಾಡ, ಗುರುದೇವಿ ಮಡಿವಾಳರ, ಜೈಯಶ್ರೀ ಹದಿಮೂರ, ಜೈರಾಬಿ ಮುಲ್ಲಾ ಸರ್ವ ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಸ್ಕಿಯಲ್ಲಿ ಕೆ.ಶಿವನಗೌಡ ನಾಯಕ ಅಭಿಮಾನಿ ಬಳಗದಿಂದ ಹೊಸ ವರ್ಷದ ಕ್ಯಾಲೆಂಡರ್ ಹಂಚಿಕೆ



❑ ನೈಜ್ಯ ದೆಸೆ ನ್ಯೂಸ್

**ಮಸ್ಕಿ: ದೇವದುರ್ಗ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಕೆ. ಶಿವನಗೌಡ ನಾಯಕ ಅವರ ಅಭಿಮಾನಿ ಬಳಗದಿಂದ 2026ರ ಹೊಸ ವರ್ಷದ ಕ್ಯಾಲೆಂಡರನ್ನು ಕ್ಷೇತ್ರದ ಪ್ರತಿಯೊಂದು ಹಳ್ಳಿಗಳಲ್ಲಿ ಹಂಚಿಕೆ ಮಾಡಲಾಗುತ್ತಿದೆ ಎಂದು ತಾಲೂಕು ಪಂಚಾಯತಿ ಮಾಜಿ ಅಧ್ಯಕ್ಷ ಶಿವಣ್ಣ ನಾಯಕ ವೆಂಕಟಾಪೂರು ತಿಳಿಸಿದರು.**

ಕೆ.ಶಿವನಗೌಡ ನಾಯಕ ಅವರು ತಮ್ಮ ಅಧಿಕಾರ ಅವಧಿಯಲ್ಲಿ ಜಿಲ್ಲೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದು ಆದ್ದರಿಂದ ಇಂದು ರಾಯಚೂರು ಜಿಲ್ಲೆಯ ಪ್ರತಿಯೊಂದು ಕ್ಷೇತ್ರದಲ್ಲಿ ಹಾಗೂ ಪ್ರತಿಯೊಂದು ಹಳ್ಳಿಗಳಲ್ಲಿಯೂ ಅವರ ಅಭಿಮಾನಿಗಳು ಇದ್ದಾರೆ. ನಾವು ಕೂಡ ಕೆ ಶಿವನಗೌಡ ನಾಯಕರು ಅಭಿಮಾನಿಗಳು ಆದ್ದರಿಂದ ನಾವು ಅವರ ಮೇಲಿನ ಅಭಿಮಾನದಿಂದ ನೂತನ ವರ್ಷದ ಕ್ಯಾಲೆಂಡರ್ ಅನ್ನು ಮಸ್ಕಿ ಕ್ಷೇತ್ರದಲ್ಲಿ ಬಿಡುಗಡೆ ಮಾಡಿ ಪ್ರತಿಯೊಬ್ಬ ಅವರ ಅಭಿಮಾನಿಗಳಿಗೂ ನೂತನ ವರ್ಷದ ಕ್ಯಾಲೆಂಡರ್ ಅನ್ನು ತಲುಪಿಸುವ ಕಾರ್ಯವನ್ನು ಅಭಿಮಾನಿಗಳ ಬಳಗದಿಂದ ಹಂಚಿಕೆ ಮಾಡಲಾಗುತ್ತಿದೆ.

ಶಿವನಗೌಡ ನಾಯಕ ಅವರ ಅಭಿಮಾನಿಗಳು ಸ್ವಯಂ ಪ್ರೇರಣೆಯಿಂದ ಕಳೆದ ಎರಡ್ಮೂರು ದಿನಗಳಿಂದ ಕ್ಷೇತ್ರದ ವಿವಿಧ ಹಳ್ಳಿಗಳಲ್ಲಿ ಕ್ಯಾಲೆಂಡರ್ ಹಂಚಿಕೆ ಮಾಡಿದ್ದಾರೆ. ಅದೇ ರೀತಿಯಾಗಿ ಕ್ಷೇತ್ರದ ಪ್ರತಿಯೊಂದು ಹಳ್ಳಿಗೂ 2026ರ ಹೊಸ ವರ್ಷದ ಕ್ಯಾಲೆಂಡರ್‌ನ್ನು ತಲುಪಿಸಲಾಗುತ್ತದೆ ಎಂದು ತಿಳಿಸಿದರು.

# ಜ.01 ರಿಂದ 30 ರವರೆಗೆ ರಸ್ತೆ ಸುರಕ್ಷತಾ ಜಾಗೃತಿ ಅಭಿಯಾನ

❑ ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ: ಡಿ 29 ಜನವರಿ 01 ರಿಂದ 30 ರ ವರೆಗೆ ಬಳ್ಳಾರಿ ಜಿಲ್ಲೆಯಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಅಭಿಯಾನ ನಡೆಯಲಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ರಾಜೇಶ್ ಎನ್.ಹೊಸಮನೆ ಅವರು ತಿಳಿಸಿದ್ದಾರೆ.**

ಈ ಕುರಿತು ಮಾಹಿತಿ ನೀಡಿರುವ ಅವರು, ಸಾರಿಗೆ ಇಲಾಖೆ, ಪೊಲೀಸ್, ಸಂಚಾರ ಇಲಾಖೆ, ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕಲ್ಯಾಣ ಕುಟುಂಬ ಸೇವೆಗಳು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಲೋಕೋಪಯೋಗಿ ಇಲಾಖೆ, ವಕೀಲರ ಸಂಘ, ವಿಮಾ ಕಂಪನಿಗಳು ಮತ್ತು ಎನ್‌ಜಿಓ ಸಂಸ್ಥೆಗಳಲ್ಲಿ ಎಲ್ಲಾ ಶಾಲೆಗಳು, ಕಾಲೇಜುಗಳು, ಸಾರ್ವಜನಿಕ / ಖಾಸಗಿ ಸಂಸ್ಥೆಗಳು, ಸಮುದಾಯ ಕೇಂದ್ರಗಳು, ಕ್ಲಬ್, ಆಸ್ಪತ್ರೆಗಳು, ಪೊಲೀಸ್ ಮತ್ತು ಸಂಚಾರ ಕಚೇರಿಗಳಲ್ಲಿ ಪಿಎಲ್‌ವಿ ಮತ್ತು ಎನ್‌ಜಿಓ ಪ್ರತಿನಿಧಿಗಳನ್ನು ಒಳಗೊಂಡಂತೆ ರಸ್ತೆ ಸುರಕ್ಷತಾ ಕ್ರಮಗಳ ಕುರಿತು ಅಭಿಯಾನಗಳನ್ನು ಹಮ್ಮಿಕೊಂಡು ಜನರಲ್ಲಿ ಜಾಗೃತಿ ಮೂಡಿಸುವಂತೆ ರಾಜ್ಯ ಕಾನೂನು ಸೇವಾ ಪ್ರಾಧಿಕಾರದಿಂದ ನಿರ್ದೇಶಿಸಲಾಗಿದೆ ಎಂದಿದ್ದಾರೆ.

ರಸ್ತೆ ನಿಯಮಗಳ ಪಾಲನೆ, ಅಪಘಾತ ತಡೆಗಟ್ಟುವಿಕೆ ಮತ್ತು ಸುರಕ್ಷಿತ ರಸ್ತೆ ಸಂಚಾರದ ಕುರಿತು ಜನಸಾಮಾನ್ಯರು, ಯುವಜನರು ಸೇರಿದಂತೆ ಪ್ರತಿಯೊಬ್ಬರಿಗೂ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜಾಗೃತಿ ಜಾಥಾ, ಬೀದಿ ನಾಟಕ ಮತ್ತು ಎಲ್ಲಾ ಶಾಲಾ-ಕಾಲೇಜುಗಳಲ್ಲಿ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಸಂಚಾರಿ ನಿಯಮಗಳ ಪಾಲನೆ ಸರಿಯಾಗಿ ಆಗುತ್ತಿಲ್ಲವಾದ್ದರಿಂದ ರಸ್ತೆಯ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿವೆ. ಅಪಘಾತಗಳನ್ನು ಕಡಿಮೆ



ಮಾಡಲು ಜನರಲ್ಲಿ ಸಂಚಾರಿ ನಿಯಮಗಳ ಕುರಿತು ಜಾಗೃತಿ ಮೂಡಿಸಬೇಕು. ವಿಶೇಷವಾಗಿ ಶಾಲಾ-ಕಾಲೇಜು ಮಕ್ಕಳಲ್ಲಿ ಸಂಚಾರ ನಿಯಮಗಳ ಕುರಿತು ಅರಿವು ಮೂಡಿಸಲಾಗುವುದು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಡಿ ಹಮ್ಮಿಕೊಂಡಿರುವ ರಸ್ತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮಗಳಿಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ, ನಗರ ಸ್ಥಳೀಯ ಸಂಸ್ಥೆಗಳು ಸೇರಿದಂತೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಅಗತ್ಯ ಸಹಕಾರ ನೀಡಬೇಕು ಎಂದು ಅವರು ತಿಳಿಸಿದ್ದಾರೆ. ಸಂಚಾರ ನಿಯಮಗಳ ಕುರಿತು ಜಾಗೃತಿ ಮೂಡಿಸಲು ಸಾರ್ವಜನಿಕರು, ಸಂಘ-ಸಂಸ್ಥೆಗಳು ಸೇರಿದಂತೆ ಪ್ರತಿಯೊಬ್ಬರು ಶ್ರಮಿಸಬೇಕು. ಪೊಲೀಸ್ ಇಲಾಖೆ ಮತ್ತು ಸಾರಿಗೆ ಇಲಾಖೆಯವರು ಬಸ್ ಗಳಲ್ಲಿ ಸುರಕ್ಷತಾ ಕ್ರಮಗಳ ಪರಿಶೀಲನೆ ಹಾಗೂ ಲಗೇಜುಗಳ ತಪಾಸಣೆ ನಡೆಸಬೇಕು.

ಅಪ್ರಾಪ್ತರು ವಾಹನಗಳನ್ನು ಚಲಾಯಿಸುವಂತಿಲ್ಲ. ನಗರದಲ್ಲಿ ವಾಹನಗಳ ಸಂಖ್ಯೆಯು ಹೆಚ್ಚಾಗಿದ್ದು, ಅವುಗಳನ್ನು ಸರಿಯಾದ ಸ್ಥಳದಲ್ಲಿ ಪಾರ್ಕಿಂಗ್ ಮಾಡಬೇಕು. ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ಸೂಕ್ತ ವಾಹನಗಳ ಪಾರ್ಕಿಂಗ್ ಸ್ಥಳಗಳನ್ನು ಗುರುತಿಸಬೇಕು. 18 ವರ್ಷದೊಳಗಿನ ಮಕ್ಕಳು ವಾಹನಗಳನ್ನು ಚಲಾಯಿಸುತ್ತಿರುವುದು ಕಂಡುಬರುತ್ತಿದ್ದು, ಅವರ ಪೊ?ಷಕರ ಮೇಲೆ ಪ್ರಕರಣ ದಾಖಲಿಸಬೇಕು. ರಾಷ್ಟ್ರೀಯ ಹೆದ್ದಾರಿ ರಸ್ತೆಯಲ್ಲಿ ಕೆಟ್ಟುನಿಂತ ವಾಹನಗಳನ್ನು ರಸ್ತೆಯ ಮಧ್ಯದಲ್ಲಿ ನಿಲ್ಲಿಸದೇ ರಸ್ತೆ ಬದಿಗೆ ಹಾಕಿ ರಿಪೇರಿ ಮಾಡಬೇಕು. ಈ ಎಲ್ಲಾ ರಸ್ತೆ ಸುರಕ್ಷತೆಯ ಬಗ್ಗೆ ಇರುವ ಎಲ್ಲಾ ವಿಷಯಗಳ ಕುರಿತು ಜನವರಿ-1 ರಿಂದ 30 ರವರೆಗೆ ನಡೆಯುವ ರಸ್ತೆ ಸುರಕ್ಷತಾ ಜಾಗೃತಿ ಅಭಿಯಾನದ ಮೂಲಕ ಎಲ್ಲಾರಿಗೂ ತಿಳುವಳಿಕೆ ನೀಡುವ ಸಂಬಂಧವಾಗಿ ಶಾಲಾ-ಕಾಲೇಜುಗಳು, ಪೊಲೀಸ್ ಠಾಣೆಗಳು, ಸರ್ಕಾರಿ ಕಚೇರಿಗಳು ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಅಭಿಯಾನ ಕಾರ್ಯಕ್ರಮ, ಬೀದಿ ನಾಟಕ ಮತ್ತು ಜಾಥಾ ಹಮ್ಮಿಕೊಳ್ಳಬೇಕು. ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಹಾಗೂ ಭಾಷಣ ಸ್ಪರ್ಧೆ ಆಯೋಜಿಸಬೇಕು ಎಂದು ಅವರು ತಿಳಿಸಿದ್ದಾರೆ.

## ನೇಮಕಾತಿ ಪ್ರಕಟಣೆ


DYES ಕರ್ನಾಟಕ ನೇಮಕಾತಿ 2026–13 ಫಿಟ್‌ನೆಸ್ ತರಬೇತುದಾರ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ DYES ಕರ್ನಾಟಕ ನೇಮಕಾತಿ 2025: 13 ಫಿಟ್‌ನೆಸ್ ತರಬೇತುದಾರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಡಿಸೆಂಬರ್ 2025 ರ ಅಧಿಕೃತ ಅಧಿಸೂಚನೆಯ ಮೂಲಕ ಫಿಟ್‌ನೆಸ್ ತರಬೇತುದಾರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಜನವರಿ 05, 2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಜಇಖ ಕರ್ನಾಟಕ ನೇಮಕಾತಿ 2026–13 ಫಿಟ್‌ನೆಸ್ ತರಬೇತುದಾರ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ DYES ಕರ್ನಾಟಕ ನೇಮಕಾತಿ 2025: 13 ಫಿಟ್‌ನೆಸ್ ತರಬೇತುದಾರ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಡಿಸೆಂಬರ್ 2025 ರ ಅಧಿಕೃತ ಅಧಿಸೂಚನೆಯ ಮೂಲಕ ಫಿಟ್‌ನೆಸ್ ತರಬೇತುದಾರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಬೆಂಗಳೂರಿನಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು – ಕರ್ನಾಟಕ ಸರ್ಕಾರ ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು ಜನವರಿ 05, 2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: dyes.karnataka.gov.in

# GIO (Girls Islamic Organisation) ಸಿಂಧನೂರು 2026ನೇ ಅವಧಿಗೆ ಅಧ್ಯಕ್ಷೆಯಾಗಿ ನೆಹಾ ಸಮ್ರೀನ್ ಮರು ಆಯ್ಕೆ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಜಮಾಅತೆ ಇಸ್ಲಾಮಿ ಹಿಂದ್ (JIH) ನ ವಿದ್ಯಾರ್ಥಿನಿಯರ ಅಂಗಸಂಸ್ಥೆಯಾಗಿರುವ Girls Islamic Organisation (GIO) ಸಿಂಧನೂರು ಘಟಕದ ವತಿಯಿಂದ 2026ನೇ ಅವಧಿಗೆ ಅಧ್ಯಕ್ಷೆಯಾಗಿ ಸಹೋದರಿ ನೆಹಾ ಸಮ್ರೀನ್ (ಆಲಿಮಾ) ಅವರನ್ನು ಆಯ್ಕೆ ಮಾಡಲಾಗಿದೆ.**

Girls Islamic Organisation ಒಂದು ಮೌಲ್ಯಾಧಾರಿತ ಹಾಗೂ ಸಮಾಜಮುಖಿ ವಿದ್ಯಾರ್ಥಿನಿಯರ ಸಂಘಟನೆಯಾಗಿದ್ದು, ವಿಶೇಷವಾಗಿ ಯುವತಿಯರು ಮತ್ತು ವಿದ್ಯಾರ್ಥಿನಿಯರ ನಡುವೆ ಸಮಾಜದ ಪುನರ್ ನಿರ್ಮಾಣ, ನೈತಿಕ ಜಾಗೃತಿ ಹಾಗೂ ತಪ್ಪು ಪ್ರವೃತ್ತಿಗಳ ತಡೆಗಟ್ಟುವಿಕೆಗಾಗಿ ಕಾರ್ಯನಿರ್ವಹಿಸುತ್ತಿದೆ. ಸಂಘಟನೆಯ ಪ್ರಧಾನ ಸತ್ಕಾರ್ಯಕ್ಕೆ



ಪ್ರೇರೇಪಿಸಿ ದುಷ್ಕಾರ್ಯದಿಂದ ತಡೆಹಿಡಿಯುವ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸುತ್ತಿದೆ. ಅಲ್ಲಾಹ್‌ನ ಕೃಪೆಯಿಂದ fLM ಸಂಸ್ಥೆ ರಾಷ್ಟ್ರೀಯ, ರಾಜ್ಯ, ಜಿಲ್ಲಾ ಹಾಗೂ ಸ್ಥಳೀಯ ಮಟ್ಟಗಳಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ.

GIO ತನ್ನ ಸೇವೆಯನ್ನು ಸಂಘಟನೆ ಮತ್ತು ತರಬೇತಿ, ಶಿಕ್ಷಣ, ಸಾತ್ವಿಕ ಸಮಾಜ ಮತ್ತು ಸಾಮಾಜಿಕ ಸೇವೆ ಎಂಬ ವಿವಿಧ ವಿಭಾಗಗಳ ಮೂಲಕ ವಿಸ್ತರಿಸಿದೆ. ಗಮನಾರ್ಹವಾಗಿ, ಸಹೋದರಿ ನೆಹಾ ಸಮ್ರೀನ್ ಅವರು ಕಳೆದ ಅವಧಿಯಲ್ಲಿಯೂ ಜಿಐಒ ಸಿಂಧನೂರು ಘಟಕದ ಅಧ್ಯಕ್ಷೆಯಾಗಿ ಯಶಸ್ವಿಯಾಗಿ ಸೇವೆ ಸಲ್ಲಿಸಿದ್ದು, ಸಂಘಟನೆಯ ಕಾರ್ಯಕ್ರಮಗಳನ್ನು ಶಿಸ್ತಿನೊಂದಿಗೆ ನಡೆಸಿ, ಯುವತಿಯರಲ್ಲಿ ನಾಯಕತ್ವ, ನೈತಿಕತೆ ಹಾಗೂ ಸಂಘಟನಾತ್ಮಕ ಜಾಗೃತಿಯನ್ನು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ಅವರ ಸಮರ್ಪಿತ ಸೇವೆ ಮತ್ತು ಕಾರ್ಯಕ್ಷಮತೆಯನ್ನು ಪರಿಗಣಿಸಿ, 2026ನೇ ಅವಧಿಗೂ ಅವರನ್ನು ಮರು ಆಯ್ಕೆ ಮಾಡಲಾಗಿದೆ. ಅವರ ನಾಯಕತ್ವದಲ್ಲಿ ಸಂಘಟನೆ ಮತ್ತು ತರಬೇತಿ ವಿಭಾಗದ ಮೂಲಕ ಕಾರ್ಯಕರ್ತೆಯರ ನೈತಿಕ ಹಾಗೂ ಮೌಲ್ಯಾಧಾರಿತ ತರಬೇತಿಗೆ, ಚಟುವಟಿಕೆಗಳ ಮೂಲಕ ಸೌಹಾರ್ದ ಹಾಗೂ ಸಂವಾದ ಕಾರ್ಯಕ್ರಮಗಳಿಗೆ, ಶಿಕ್ಷಣ ವಿಭಾಗದ ಮೂಲಕ ಶಾಲಾ–ಕಾಲೇಜುಗಳಲ್ಲಿ ಮಾರ್ಗದರ್ಶನ ಮತ್ತು ಪ್ರತಿಭಾ ಅನ್ವೇಷಣೆಗೆ, ಮತ್ತು ಸಾಮಾಜಿಕ ಸೇವಾ ವಿಭಾಗದ ಮೂಲಕ ಬಡವರು, ಅನಾಥರು ಹಾಗೂ ವೃದ್ಧರಿಗೆ ನೆರವು ನೀಡುವ ಸೇವಾ ಕಾರ್ಯಗಳಿಗೆ ನಿರಂತರವಾಗಿ ಒತ್ತು ನೀಡುತ್ತಿದೆ. ಅಲ್ಲಾಹ್ ಸಹೋದರಿ ನೆಹಾ ಸಮ್ರೀನ್ ಅವರಿಗೆ ಸ್ಥಿರತೆ (ಇಸ್ತಿಕಾಮತ್), ನಿಷ್ಠೆ (ಇಖ್ಲಾಸ್) ಹಾಗೂ ಕಾರ್ಯಸಾಮರ್ಥ್ಯವನ್ನು ದಯಪಾಲಿಸಲಿ. ಅವರ ಮುಂದಾಳತ್ವದಲ್ಲಿ ಜಿಐಒ ಸಿಂಧನೂರು ಘಟಕವು ಇನ್ನಷ್ಟು ಬಲಿಷ್ಠವಾಗಿ ಕಾರ್ಯನಿರ್ವಹಿಸಿ, ಯುವತಿಯರ ಶೈಕ್ಷಣಿಕ, ಸಾಮಾಜಿಕ ಮತ್ತು ನೈತಿಕ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಲಿ ಎಂದು ಪ್ರಾರ್ಥಿಸಲಾಗಿದೆ.

## ಜಾತಿಗಳ ಜಾಡ್ಯಕ್ಕೆ ಕುವೆಂಪು ಸಾಹಿತ್ಯವೇ ಔಷಧಿ: ನರಸಿಂಹ ಹೆಚ್

ನೈಜ್ಯ ದೆಸೆ ನ್ಯೂಸ್

**ಮನವಿ: ಧರ್ಮವು ಒಂದು ನಡಾವಳಿಯೆ ಹೊರತು ಅದು ನಂಬಿಕೆಯಲ್ಲ. ಪರಸ್ಪರ ಧರ್ಮಗಳನ್ನು ದ್ವೇಷಿಸದೆ ಪ್ರೀತಿ, ಸಹೋದರತೆಯಿಂದ ಸರ್ವಧರ್ಮಗಳನ್ನು ಗೌರವಿಸುವ ವ್ಯಕ್ತಿಯೆ ವಿಶ್ವಮಾನವನಾಗಲು ಸಾಧ್ಯ ಎಂದು ಕರ್ನಾಟಕ ರಕ್ಷಣಾ ವೇದಿಕೆ ಹೆಚ್ ಶಿವರಾಮೇಗೌಡ ಬಣದ ತಾಲೂಕ ಅಧ್ಯಕ್ಷ ನರಸಿಂಹ ಹೆಚ್ ಹೇಳಿದರು.**



ಪಟ್ಟಣದ ಕೋನಾಪುರ ಪೇಟೆ ಪ್ರೌಢಶಾಲೆಯಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಕನ್ನಡಪರ ಸಂಘಟನೆಗಳ ಒಕ್ಕೂಟ ವತಿಯಿಂದ ಹಮ್ಮಿಕೊಂಡಿದ್ದ ಮಹಾಕವಿ ಕುವೆಂಪು ಜನ್ಮೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. ಇದೇ ವೇಳೆ ನಿವೃತ್ತ ವೀರನಗೌಡ ಪೊಲೀಸ್ ರವರು ಮಾತನಾಡಿ ಅನಾದಿ ಕಾಲದಿಂದಲೂ ಭಾರತೀಯ ಸಮಾಜದಲ್ಲಿ ಬೇರೂರಿರುವ ವರ್ಣಾಶ್ರಮ ವ್ಯವಸ್ಥೆ ದೇಶದ ಪ್ರಗತಿಗೆ ಮಾರಕವಾಗಿದೆ. ಎಲ್ಲಿಯವರೆಗೂ ಈ ಜಾತಿ ವ್ಯವಸ್ಥೆ ಜೀವಂತ ಇರೋವರೆಗೂ ಅಸಮಾನತೆ, ಹಿಂಸೆ, ಅತ್ಯಾಚಾರವನ್ನು ಕಾಣಬಹುದಾಗಿದೆ. ಇಂತಹ ಜಾತಿ ವ್ಯವಸ್ಥೆ, ಮೂಢನಂಬಿಕೆ ಮತ್ತು ಕಂದಾಚಾರಗಳ ಬಗ್ಗೆ ತಮ್ಮ ಲೇಖನಿ ಮೂಲಕ ವಿರೋಧಿಸಿದ ರಾಷ್ಟ್ರಕವಿ ಕುವೆಂಪು ಅವರು ಶೂದ್ರ ವರ್ಗದ ಕವಿಯಾಗಿ ಹೊರಹೊಮ್ಮಿದ್ದರು. ಜಾತಿ, ಮೌಢ್ಯತೆ ಮತ್ತು ಅಂದಕಾರದ ಅಂಕುಶದಿಂದ ಹೊರಬಂದು ನಿರಂಕುಶಮತಿಗಳಾಗಿ ಎಂದು ಸಂದೇಶ ನೀಡಿದ ಮಹಾನ ಕವಿ ಕವೆಂಪು ಅವರು ಎಂದರು. ಇದೆ ವೇಳೆ ಸರ್ಕಾರಿ ಪ್ರೌಡಶಾಲೆ ವತಿಯಿಂದ ವೇದಿಕೆಯ ಮೇಲಿನ ಎಲ್ಲಾ ಗಣ್ಯರಿಗೆ ಸನ್ಮಾನಿಸಿ ಗೌರವಿಸಲಾಯಿತು. ಈ ಸಂಧರ್ಬದಲ್ಲಿ ಯಲ್ಲಪ್ಪ ನಿಲಗಲ್ ತಾಲೂಕು ಗೌರವ ಅಧ್ಯಕ್ಷರು, ದೀಪಕ್ ಯಾದವ್ ತಾಲೂಕು ಪ್ರಧಾನ ಕಾರ್ಯದರ್ಶಿಗಳು, ಪತ್ರಕರ್ತ ಸಂಘದ ಅಧ್ಯಕ್ಷ ಅಶೋಕ್ ತಡ್ಕಲ್, ಕನ್ನಡ ಸಾಹಿತ್ಯ ಪರಿಷತ್ತು ತಾಲೂಕ ಅಧ್ಯಕ್ಷ ಶರಣಬಸವ ನೀರಮಾನ್ವಿ, ಉಪಾಧ್ಯಕ್ಷ ಗೂಳಪ್ಪ ಬೊಮ್ಮನಾಳ, ನಾಗರಾಜ್ ಶೆಟ್ಟಿ ಬಿಜೆಪಿ ಮುಖಂಡರು, ರವಿಕುಮಾರ್ ಮದ್ಲಾಪುರ್ ತಾಲೂಕು ಉಪಾಧ್ಯಕ್ಷರು, ಶಾಂತಕುಮಾರ್ ನಗರ ಘಟಕ ಗೌರವ ಅಧ್ಯಕ್ಷರು, ಮಹೇಂದ್ರ ನಾಯಕ್ ನಗರ ಘಟಕ ಅಧ್ಯಕ್ಷರು, ಸಿದ್ದಪ್ಪ ಮದ್ರಾಪುರ್, ಸನತ್ ಕುಮಾರ್ ಕುಮಾರ್, ನವೀನ್ ಕುಮಾರ್, ಶ್ರೀನಿವಾಸ್, ರಬ್ಬಣಕಲ್ , ತಾಯಪ್ಪ, ದೇವರಾಜ್, ವಿನಯ್ ಕುಮಾರ್ ಬಿ ಎಂ, ಅಂಜಿ ಯಾದವ್ ಸೇರಿದಂತೆ ಶಾಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ರಾಷ್ಟ್ರಕವಿ ಕುವೆಂಪು ಗ್ರಂಥಾಲಯದಲ್ಲಿ ಸಮಾನ ಮನಸ್ಕರ ವೇದಿಕೆ,ಹಾಗೂ ಎಲ್ ಕೆಜಿ,ಯುಕೆಜಿ, ಮಕ್ಕಳಿಂದ.ವಿಶ್ವಮಾನವ ರಾಷ್ಟ್ರಕವಿ ಕುವೆಂಪು ಜನ್ಮದಿನಾಚರಣೆ



ನೈಜ್ಯ ದೆಸೆ ನ್ಯೂಸ್

**ಹಟ್ಟಿ ಚಿನ್ನದ ಗಣಿ: ಡಿ 29 ಹಟ್ಟಿ ಚಿನ್ನದ ಗಣಿ ಸಮೀಪದ ಹಿರೇನಗನೂರಿನ ಕುವೆಂಪು ಗ್ರಂಥಾಲಯದಲ್ಲಿ.ಸಮಾನ ಮನಸ್ಕರ ವೇದಿಕೆ,ಹಾಗು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ ಕೆ ಜಿ,ಯು ಕೆ ಜಿ ಇಂಗ್ಲೀಷ್ ಮೀಡಿಯಂ ಮಕ್ಕಳ ಜೊತೆ ಇಂದು ರಾಷ್ಟ್ರಕವಿ ಕುವೆಂಪು ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಅವರ ಹುಟ್ಟುಹಬ್ಬವನ್ನು ವಿಶ್ವಮಾನವ ದಿನವಾಗಿ ಆಚರಿಸಲಾಯಿತು. ಹಾಗೂ ನಮ್ಮೂರಿನ ಯುವ ನಾಯಕರಾದ ಶಿವನಗೌಡ ಪಾಟೀಲ್ ನಗರ್ ರವರ ಹುಟ್ಟುಹಬ್ಬವನ್ನು ಮುದ್ದು ಮಕ್ಕಳ ಜೊತೆ ಇದೇ ಸಂದರ್ಭದಲ್ಲಿ ಆಚರಿಸಲಾಯಿತು.**

ರಾಷ್ಟ್ರಕವಿ ಕುವೆಂಪುರವರ ಜನ್ಮ ದಿನಾಚರಣೆ ಕುರಿತು ಮಾತನಾಡಿದ. ನಮ್ಮೂರಿನ ಯುವ ಮಿತ್ರ ಮೌನುದ್ದೀನ್ ಬೂದಿನಾಳ ಮಾತನಾಡಿ. ಕುವೆಂಪು ರವರು 21ನೇ ಶತಮಾನ ಕಂಡ ಅದ್ಭುತ ಕವಿಗಳಲ್ಲಿ ಒಬ್ಬರು.ವರಕವಿ ಬೇಂದ್ರೆಯವರಿಂದ ಯುಗದ ಕವಿ,ಜಗದ ಕವಿ, ಎನಿಸಿಕೊಂಡಿರುವ ವಿಶ್ವಮಾನವ ಸಂದೇಶ ನೀಡಿದವರು ಕನ್ನಡದ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದವರು ಅವರೇ ನಮ್ಮ ರಾಷ್ಟ್ರಕವಿ ಕುವೆಂಪು. ಅವರ ಹುಟ್ಟುಹಬ್ಬವಾದ ಡಿಸೆಂಬರ್ 29 ಅವರ ಜನ್ಮದಿನಾಚರಣೆಯನ್ನು ವಿಶ್ವ ಮಾನವ ದಿನಾಚರಣೆಯಾಗಿ ಆಚರಿಸಲು ಮುಖ್ಯ ಕಾರಣ, ಕುವೆಂಪು ಅವರು ಸಾರಿದ 'ಮನುಜ ಮತ ವಿಶ್ವಪಥ' ಎಂಬ ವಿಶ್ವ ಮಾನವ ಸಂದೇಶದ ಗೌರವಾರ್ಥ. ಎಲ್ಲಾ ಮಾನವರು ಭಾಷೆ,ಧರ್ಮ,ಜಾತಿ,ವರ್ಣಗಳ ಗಡಿಗಳನ್ನು ಮೀರಿ ಒಂದೇ ವಿಶ್ವ ಕುಟುಂಬದ ಸದಸ್ಯರು ಎಂಬ ಕುವೆಂಪು ಅವರ ಆದರ್ಶವನ್ನು ಪಸರಿಸಲು ಕರ್ನಾಟಕ ಸರ್ಕಾರವು 2015 ರಲ್ಲಿ ಡಿಸೆಂಬರ್ 29 ರಂದು ಇದನ್ನು ಅಧಿಕೃತವಾಗಿ ಘೋಷಿಸಿತು.ಶಿಕ್ಷಣದ ಮೂಲಕ ವಿಶ್ವವನ್ನು ಒಂದುಗೂಡಿಸುವ ಅವರ ಆಶಯವನ್ನು. ಶಾಲಾ–ಕಾಲೇಜುಗಳಲ್ಲಿ ಪಠನ ಮತ್ತು ವಿಚಾರ ಸಂಕೀರ್ಣದ ಮೂಲಕ ಮುಂದಿನ ಪೀಳಿಗೆಗೆ ನಾವು ಅವರ ವಿಚಾರವನ್ನು ತಲುಪಿಸುವಂತಹ ಕೆಲಸ ಮಾಡಬೇಕು ಎಂದು ಮಾತನಾಡಿದರು. ನಂತರ ಮುದ್ದು ಮಕ್ಕಳಿಗೆ ಕೇಕ್ ಮತ್ತು ಚಾಕ್ಲೇಟ್ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಿವನಗೌಡ ಪಾಟೀಲ್ ನಗರ್,ಅಬ್ರಹಾಮ್ ಸಲಬೂರು,ಮೌನುದ್ದೀನ್ ಬೂದಿನಾಳ,ಎಸ್ ಡಿ ಎಂ ಸಿ ಉಪಾಧ್ಯಕ್ಷ ಕನಕಪ್ಪ,ವಿಘ್ನೇಶ್ ಪತ್ರಕರ್ತರು,ಚನ್ನು ಹುಬ್ಬಳ್ಳಿ,ದೇವಪ್ಪ ಹುಬ್ಬಳ್ಳಿ,ಯಮನು ಹುಬ್ಬಳ್ಳಿ, ಮರಿಯಾ ಟೀಚರ್,ರೇಣುಕಾ ಸಹಾಯಕಿ ಹಾಗೂ ಮುದ್ದು ಮಕ್ಕಳು ಉಪಸ್ಥಿತರಿದ್ದರು.

# ರಿಮ್ಸ್ ಆಸ್ಪತ್ರೆಯಲ್ಲಿ ಖಾಸಗಿ ಆಂಬುಲೆನ್ಸ್ ಗಳ ಹಾವಳಿ; ದಂಧೆಗೆ ಕಡಿವಾಣ ಹಾಕಲು ಭೀಮ್ ಆರ್ಮಿ ಆಗ್ರಹ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ವೈದ್ಯಕೀಯ ವಿಜ್ಞಾನ ಸಂಸ್ಥೆ (ರಿಮ್ಸ್) ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಖಾಸಗಿ ಆಂಬುಲೆನ್ಸ್‌ಗಳ ದರ್ಬಾರ್ ರಾಜಾರೋಷವಾಗಿ ನಡೆಯುತ್ತಿದ್ದು, ಇದಕ್ಕೆ ತಕ್ಷಣ ಕಡಿವಾಣ ಹಾಕಬೇಕು. ಈ ದಂಧೆಯಲ್ಲಿ ಶಾಮೀಲಾಗಿರುವ ರಿಮ್ಸ್ ಸಿಬ್ಬಂದಿಗಳ ವಿರುದ್ಧ ಸಮಗ್ರ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಜಿಲ್ಲಾಡಳಿತಕ್ಕೆ ಹಾಗೂ ಜಿಲ್ಲಾ ವೈದ್ಯಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದರು.**

ರಾಯಚೂರು ಜಿಲ್ಲೆಯ ಪ್ರಮುಖ ಸರ್ಕಾರಿ ಆಸ್ಪತ್ರೆಯಾಗಿರುವ ರಿಮ್ಸ್‌ಗೆ ಪ್ರತಿನಿತ್ಯ ರಾಯಚೂರು ಜಿಲ್ಲೆಯ ಐದಾರು ತಾಲೂಕುಗಳಿಂದ, ಗ್ರಾಮಾಂತರ ಪ್ರದೇಶಗಳಿಂದ ಮಾತ್ರವಲ್ಲದೆ ಯಾದಗಿರಿ ಜಿಲ್ಲೆ ಹಾಗೂ ಗಡಿ ಪ್ರದೇಶಗಳಾದ ಆಂಧ್ರಪ್ರದೇಶ ಮತ್ತು ತೆಲಂಗಾಣದಿಂದಲೂ ನೂರಾರು ರೋಗಿಗಳು ಚಿಕಿತ್ಸೆಗೆ ಆಗಮಿಸುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಬಂಡವಾಳ ಮಾಡಿಕೊಂಡ ಖಾಸಗಿ ಆಂಬುಲೆನ್ಸ್ ಮಾಲಿಕರು ರೋಗಿಗಳಿಂದ



ದುಪ್ಪಟ್ಟು ಹಣ ವಸೂಲಿ ಮಾಡುತ್ತಾ ದಂಧೆಗೆ ಇಳಿದಿದ್ದಾರೆ ಎಂದು ಆರೋಪಿಸಿದರು. ನಿಯಮಾನುಸಾರ ಯಾವುದೇ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಖಾಸಗಿ ಆಂಬುಲೆನ್ಸ್‌ಗಳಿಗೆ ನಿಲುಗಡೆಗೆ ಅವಕಾಶವಿಲ್ಲ. ಅವುಗಳು ಆಸ್ಪತ್ರೆ ಹೊರಭಾಗದಲ್ಲಿ ನಿಗದಿತ ಸ್ಥಳದಲ್ಲಿ ಇರಬೇಕು ಮತ್ತು ಅಗತ್ಯವಿದ್ದಾಗ ಮಾತ್ರ ಕರೆ ಬಂದ ಮೇಲೆ ಸೇವೆ ಸಲ್ಲಿಸಬೇಕು.

ಆದರೆ ಈ ಎಲ್ಲ ನಿಯಮಗಳನ್ನು ಉಲ್ಲಂಘಿಸಿ ರಾಯಚೂರು ರಿಮ್ಸ್ ಆಸ್ಪತ್ರೆಯ ಆವರಣದಲ್ಲಿಯೇ ಖಾಸಗಿ ಆಂಬುಲೆನ್ಸ್‌ಗಳು ಸದಾ ಬೀಡು ಬಿಟ್ಟಿರುವುದು ಗಂಭೀರ ಅಕ್ರಮಕ್ಕೆ ಸಾಕ್ಷಿಯಾಗಿದೆ ಎಂದರು. ಸದ್ಯ ರಿಮ್ಸ್ ಆಸ್ಪತ್ರೆಯಲ್ಲಿ 6 ಸರ್ಕಾರಿ ಆಂಬುಲೆನ್ಸ್‌ಗಳಿದ್ದರೂ, 9 ಖಾಸಗಿ ಆಂಬುಲೆನ್ಸ್‌ಗಳು ನಿರಂತರವಾಗಿ ಆಸ್ಪತ್ರೆಯ ಆವರಣದಲ್ಲೇ ಕಾಣಿಸಿಕೊಳ್ಳುತ್ತಿವೆ. ಇದಕ್ಕಿಂತಲೂ ಆತಂಕಕಾರಿ ವಿಷಯವೆಂದರೆ, ರಿಮ್ಸ್ ಆಸ್ಪತ್ರೆಯ ಕೆಲ ಸಿಬ್ಬಂದಿಗಳು ಈ ದಂಧೆಯಲ್ಲಿ ಭಾಗಿಯಾಗಿದ್ದು, ಸರ್ಕಾರಿ ಆಂಬುಲೆನ್ಸ್‌ಗಳಿಗೆ ವಿವಿಧ ಸಮಸ್ಯೆಗಳಿವೆ ಎಂದು ರೋಗಿಗಳ ಸಂಬಂಧಿಕರಿಗೆ ಹೇಳಿ ಖಾಸಗಿ ಆಂಬುಲೆನ್ಸ್‌ಗಳನ್ನು ಸಂಪರ್ಕಿಸುವಂತೆ ಸೂಚಿಸುತ್ತಿದ್ದಾರೆ ಎಂಬ ಆರೋಪಗಳು ಕೇಳಿಬರುತ್ತಿವೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಆಡಳಿತಾಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿರುವುದು ಏಕೆ ಎಂಬ ಪ್ರಶ್ನೆ ಸಾರ್ವಜನಿಕ ವಲಯದಲ್ಲಿ ಮೂಡಿದೆ.

ಈ ಅಕ್ರಮ ದಂಧೆಯಲ್ಲಿ ಆಡಳಿತದವರಿಗೂ ಕಮಿಷನ್ ಹೋಗುತ್ತಿದೆಯೇ ಎಂಬ ಅನುಮಾನಗಳು ವ್ಯಕ್ತವಾಗುತ್ತಿದೆ ಎಂದು ಆಗ್ರಹಿಸಿದರು. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ, ಖಾಸಗಿ ಆಂಬುಲೆನ್ಸ್ ದಂಧೆಗೆ ಕಡಿವಾಣ ಹಾಕಬೇಕು. ಜೊತೆಗೆ ಶಾಮಿಲಾದ ಸಿಬ್ಬಂದಿಗಳ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಿ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಈ ವೇಳೆ ಜಿಲ್ಲಾಧ್ಯಕ್ಷ ಸಿ ದೀಪಕ್ ಭಂಡಾರಿ, ವಿಶ್ವನಾಥ ಬಲ್ಲಿದೇವ್, ಖಲೀಲ್ ಹೈಮದ, ಅಬ್ದುಲ್ ಖೈಯುಮ ಇನ್ನಿತರರು ಹಾಜರಿದ್ದರು.

# ಇಂದಿನಿಂದ ಅಕ್ಷರ ಜಾತ್ರೆ–ತುಮಕೂರು

ನೈಜ್ಯ ದೆಸೆ ನ್ಯೂಸ್

**17ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂಭ್ರಮಕ್ಕೆ ಜಿಲ್ಲೆ ಸಜ್ಜಾಗಿದೆ. ಎರಡು ದಿನಗಳ ಕಾಲ ನಗರದ ಅಮಾನಿಕೆರೆ ಗಾಜಿನಮನೆಯಲ್ಲಿ ಅಕ್ಷರ ಜಾತ್ರೆ ನಡೆಯಲಿದೆ. ಸಾಹಿತ್ಯ ಸಮ್ಮೇಳನದ ಪ್ರಯುಕ್ತ ನಗರದ ಪ್ರಮುಖ ವೃತ್ತಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಎಲ್ಲೆಡೆ ಕನ್ನಡದ ಬಾವುಟಗಳು ರಾರಾಜಿಸುತ್ತಿವೆ. ಗಾಜಿನಮನೆಯಲ್ಲಿ ವೇದಿಕೆಯೂ ಸಿಂಗಾರಗೊಂಡಿದೆ. ಡಿ. 29 ಮತ್ತು 30ರಂದು ಹಲವು ಗೋಷ್ಠಿಗಳನ್ನು ಏರ್ಪಡಿಸಲಾಗಿದೆ. ಸಾಹಿತ್ಯ ಶ್ರೀ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ವಿವಿಧ ಕ್ಷೇತ್ರದ ಸಾಧಕರನ್ನು ಗೌರವಿಸಲಾಗುತ್ತದೆ.**

29ರಂದು ರಾಷ್ಟ್ರಕವಿ ಕುವೆಂಪು ಜನ್ಮ ದಿನವಾಗಿದ್ದು, ಪ್ರಧಾನ ವೇದಿಕೆಯಲ್ಲಿ ವಿಶ್ವಮಾನವ ದಿನ ಆಚರಿಸಲಾಗುತ್ತದೆ. ಕುವೆಂಪು ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಗುತ್ತದೆ. ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಅವರು ಕುವೆಂಪು ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಧ್ವಜಾರೋಹಣ, ಸಮ್ಮೇಳನಾಧ್ಯಕ್ಷರ ಮೆರವಣಿಗೆ



ಮುಖಾಂತರ ಸಮ್ಮೇಳನಕ್ಕೆ ಅಧಿಕೃತವಾಗಿ ಚಾಲನೆ ದೊರೆಯಲಿದೆ. ಸಾಹಿತ್ಯಾಸಕ್ತರು, ಕಾಲೇಜು ವಿದ್ಯಾರ್ಥಿಗಳು, ಎನ್‌ಸಿಸಿ, ಎನ್‌ಎಸ್‌ಎಸ್ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಹೆಜ್ಜೆ ಹಾಕಲಿದ್ದಾರೆ. ಕೋಲಾಟ, ನಂದಿಧ್ವಜ, ವೀರಗಾಸೆ ಸೇರಿ 32 ಕಲಾ ತಂಡಗಳು ಭಾಗವಹಿಸಲಿವೆ. ಗಾಜಿನಮನೆಯಲ್ಲಿ ವೇದಿಕೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ ಉದ್ಘಾಟಿಸಲಿದ್ದಾರೆ. ಇದೇ ವೇಳೆ ಹಲವು ಕೃತಿಗಳು ಲೋಕಾರ್ಪಣೆಗೊಳ್ಳಲಿವೆ.

ಸಮ್ಮೇಳನದಲ್ಲಿ ಇಂದು ಧ್ವಜಾರೋಹಣ– ಎನ್. ತಿಪ್ಪೇಸ್ವಾಮಿ ಪಿ.ಎಸ್.ರಾಜೇಶ್ವರಿ ಕೆ.ಎಸ್.ಸಿದ್ಧಲಿಂಗಪ್ಪ. ಸ್ಥಳ– ಗಾಜಿನಮನೆ ಅಮಾನಿಕೆರೆ. ಬೆಳಿಗ್ಗೆ 7.30 ಸಮ್ಮೇಳನ ಅಧ್ಯಕ್ಷರ ಮೆರವಣಿಗೆ: ಉದ್ಘಾಟನೆ– ಸಿ.ಯೋಗಾನಂದ. ಅತಿಥಿ– ಬಾಲಗುರುಮೂರ್ತಿ ಲಕ್ಷ್ಮಿನರಸಯ್ಯ ಈಶ್ವರ್ ಕು.ಮಿರ್ಜಿ. ಸ್ಥಳ– ಟೌನ್‌ಹಾಲ್ ವೃತ್ತ. ಬೆಳಿಗ್ಗೆ 8 ಸಮ್ಮೇಳನದ ಉದ್ಘಾಟನಾ ಸಮಾರಂಭ: ಸಾನ್ನಿಧ್ಯ– ಕಾರದ ವೀರಬಸವ ಸ್ವಾಮೀಜಿ. ಉದ್ಘಾಟನೆ– ಜಿ.ಪರಮೇಶ್ವರ. ಆಶಯ ನುಡಿ– ಕೆ.ಎಸ್.ಸಿದ್ಧಲಿಂಗಪ್ಪ. 'ಕಲ್ಪ ಸುಧೆ' ನೆನಪಿನ ಸಂಚಿಕೆ ಬಿಡುಗಡೆ– ಟಿ.ಬಿ.ಜಯಚಂದ್ರ. ಧ್ವಜ ಹಸ್ತಾಂತರ– ಅಗ್ರಹಾರ ಕೃಷ್ಣಮೂರ್ತಿ. ಧ್ವಜ ಸ್ವೀಕಾರ– ಸಮ್ಮೇಳನ ಅಧ್ಯಕ್ಷ ಕರೀಗೌಡ ಬೀಚನಹಳ್ಳಿ. ಅಧ್ಯಕ್ಷತೆ– ಜಿ.ಬಿ.ಜ್ಯೋತಿಗಣೇಶ್. ಕೃತಿಗಳ ಬಿಡುಗಡೆ– ಎಸ್.ಆರ್.ಶ್ರೀನಿವಾಸ್ ಕೆ.ಷಡಕ್ಷರಿ ಸಿ.ಬಿ.ಸುರೇಶ್‌ಬಾಬು ಎಚ್.ಡಿ.ರಂಗನಾಥ್ ಆರ್. ರಾಜೇಂದ್ರ. ಸ್ಥಳ– ಗಾಜಿನಮನೆ. ಬೆಳಿಗ್ಗೆ 10 ಪುಸ್ತಕ ಮಳಿಗೆ ಚಿತ್ರಕಲೆ ಕರಕುಶಲ ವಸ್ತು ಪ್ರದರ್ಶನ ಉದ್ಘಾಟನೆ– ಶುಭ ಕಲ್ಯಾಣ್ ಜಿ.ಪ್ರಭು ಕೆ.ವಿ.ಅಶೋಕ್. ಬೆಳಿಗ್ಗೆ 10 ಗೋಷ್ಠಿ–1: ಸಮ್ಮೇಳನಾಧ್ಯಕ್ಷರೊಂದಿಗೆ ಸಂವಾದ. ಅತಿಥಿ– ಎಸ್.ಆರ್.ವಿಜಯಶಂಕರ ಎಸ್. ಚಂದ್ರಶೇಖರ್ ಎಚ್.ದಂಡಪ್ಪ ಶಿವಣ್ಣ ಬೆಳವಾಡಿ ಬಾ.ಹ.ರಮಾಕುಮಾರಿ. 12.45. ಗೋಷ್ಠಿ–2: ದಲಿತ ಸಾಹಿತ್ಯ ಐವತ್ತು – ಬಂಡಾಯ ನಲವತ್ತಾರು. ವಿಷಯ ಮಂಡನೆ– ಕೊಟ್ಟ ಶಂಕರ್ ಬಿ.ಎಸ್.ಮಂಜುಳಾ ರವಿಕುಮಾರ್ ನೀಹ. ಆಶಯ ನುಡಿ– ಬಾಲಗುರುಮೂರ್ತಿ. ಅಧ್ಯಕ್ಷತೆ– ತುಂಬಾಡಿ ರಾಮಯ್ಯ. ಮಧ್ಯಾಹ್ನ 2

ಗೋಷ್ಠಿ–3: ಕವಿಗೋಷ್ಠಿ. ಆಶಯ ನುಡಿ– ಎನ್.ತಿಪ್ಪೇಸ್ವಾಮಿ. ಅಧ್ಯಕ್ಷತೆ– ವಡ್ಡಗೆರೆ ನಾಗರಾಜಯ್ಯ. ಭಾಗವಹಿಸುವ ಕವಿಗಳು– ಎಚ್.ಪಿ.ವೆಂಕಟಾಚಲ ಚೆನ್ನಕೇಶವಮೂರ್ತಿ ಚಂದ್ರಶೇಖರ ಪ್ರಸಾದ್ ಬ್ಯಾಡನೂರು ನಾಗಭೂಷಣ ಮೇಘಾ ರಾಮದಾಸ್ ಎಂ.ಜಿ.ಧನಂಜಯ ದೇವರಮನೆ ದ್ವಾರನಕುಂಟೆ ಲಕ್ಷ್ಮಣ್ ದಾದಾಪೀರ್ ಗುಬ್ಬಚ್ಚಿ ಸತೀಶ್ ಬಿ.ಕೆ.ಮುನಿಸ್ವಾಮಿ ಮಹೇಶ್ ಗೌಡನಕಟ್ಟೆ ತಂ.ಪಾ.ಚಂದ್ರಕೀರ್ತಿ ಎಂ.ವಿ.ಶಂಕರಾನಂದ ನಿಡಸಾಲೆ ಪ್ರಸಾದ್ ಕೋಮಲಾ ಕಂಟಲಗೆರೆ ಡಿ.ನಳಿನಾ ಹರೀಶ್ ಸಿಂಗ್ರಿಹಳ್ಳಿ ಎ.ಭಾರತಿ ಸಣ್ಣರಂಗಮ್ಮ ಗರಣಿ ಮಂಜು ತರಂಗಿಣಿ ಮೇ.ನ ಅಬ್ಬಿನಹೊಳೆ ಸುರೇಶ್ ಅನಿಲ್‌ಕುಮಾರ್ ಮಾಳೋದೆ ರಂಗರಾಜು. ಮಧ್ಯಾಹ್ನ 3.45 ಗೋಷ್ಠಿ–4: ಗೌರವ ಸನ್ಮಾನ. ಅಧ್ಯಕ್ಷತೆ– ಚ.ಹ. ರಘುನಾಥ್. ಸಂಜೆ 5.30. ಸಾಂಸ್ಕೃತಿಕ ಕಾರ್ಯಕ್ರಮ. ಉದ್ಘಾಟನೆ– ಲಕ್ಷ್ಮಣದಾಸ್. ಅತಿಥಿ– ಈಶ್ವರಯ್ಯ ಸಂಜೀವಪ್ಪ ಎಂ.ವಿ.ನಾಗಣ್ಣ ವೀರೇಶ್ ಪ್ರಸಾದ್. ಅಧ್ಯಕ್ಷತೆ–ಕೆ.ಸಿ.ನರಸಿಂಹಮೂರ್ತಿ.

## ಶಿಕ್ಷಣ ಮಾರ್ಗದರ್ಶಿ ವಿಶೇಷ


**MD Organon of Medicine and Homeopathic Philosophy.**

ಆರ್ಗನಾನ್ ಆಫ್ ಮೆಡಿಸಿನ್ & ಹೋಮಿಯೋಪತಿ ಫಿಲಾಸಫಿಯಲ್ಲಿ ಎಂಡಿ ಮೂರು ವರ್ಷಗಳ ಸ್ನಾತಕೋತ್ತರ ಪದವಿ ಕಾರ್ಯಕ್ರಮವಾಗಿದ್ದು, ಇದು ಹೋಮಿಯೋಪತಿಯ ಮೂಲ ತತ್ವಗಳು, ಕಾನೂನುಗಳು ಮತ್ತು ತತ್ವಶಾಸ್ತ್ರಗಳ ಆಳವಾದ ಜ್ಞಾನವನ್ನು ಒದಗಿಸುತ್ತದೆ. ಸಂಸ್ಥಾಪಕ ಡಾ. ಸ್ಯಾಮ್ಯುಯೆಲ್ ಹ್ಯಾನೆಮನ್ ಅವರ ಬೋಧನೆಗಳು ಮತ್ತು ಅವುಗಳ ಆಧುನಿಕ ಅನ್ವಯಿಕೆಗಳ ಆಧಾರದ ಮೇಲೆ ಮುಂದುವರಿದ ಕ್ಲಿನಿಕಲ್, ಸೈದ್ಧಾಂತಿಕ ಮತ್ತು ಸಂಶೋಧನಾ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಈ ಕೋರ್ಸ್ ಅನ್ನು ವಿನ್ಯಾಸಗೊಳಿಸಲಾಗಿದೆ. ಕೋರ್ಸ್ ವಿವರಗಳು ಅವಧಿ: ಈ ಕಾರ್ಯಕ್ರಮವು ಸಾಮಾನ್ಯವಾಗಿ ಪೂರ್ಣ ಸಮಯದ ಆಧಾರದ ಮೇಲೆ ಮೂರು ವರ್ಷಗಳ ಕಾಲ ಇರುತ್ತದೆ, ಇದರಲ್ಲಿ ಪ್ರಾಯೋಗಿಕ ತರಬೇತಿ ಮತ್ತು ಇಂಟರ್ನ್‌ಶಿಪ್ ಅಥವಾ ಮನೆ ಕೆಲಸ ಸೇರಿವೆ.ಅರ್ಹತೆ:ಅಭ್ಯರ್ಥಿಗಳು ಹೋಮಿಯೋಪತಿ ಮೆಡಿಸಿನ್ ಮತ್ತು ಸರ್ಜರಿಯಲ್ಲಿ ಬ್ಯಾಚುಲರ್ (BHMS) ಪದವಿ ಅಥವಾ ರಾಷ್ಟ್ರೀಯ ಹೋಮಿಯೋಪತಿ ಆಯೋಗ (NCH) ಗುರುತಿಸಿದ ಸಮಾನ ಅರ್ಹತೆಯನ್ನು ಹೊಂದಿರಬೇಕು.ಒಂದು ವರ್ಷದ ಕಡ್ಡಾಯ ಇಂಟ-ರ್ನ್‌ಶಿಪ್ ಅಗತ್ಯವಿದೆ.ಈ ಕೋರ್ಸ್ ಆರ್ಗನಾನ್ ಆಫ್ ಮೆಡಿಸಿನ್‌ನಲ್ಲಿ ವಿವರಿಸಿದಂತೆ ಹೋಮಿಯೋಪತಿಯ ಮೂಲಭೂತ ತತ್ವಗಳ ಅಧ್ಯಯನ ಮತ್ತು ಪ್ರಾಯೋಗಿಕ ಅನ್ವಯದ ಸುತ್ತ ಸುತ್ತುತ್ತದೆ.ಮೂಲ ಪರಿಕಲ್ಪನೆಗಳು: ಅಧ್ಯಯನದ ಪ್ರಮುಖ ಕ್ಷೇತ್ರಗಳಲ್ಲಿ ಹೋಲಿಕೆಗಳ ನಿಯಮ, ಪ್ರಮುಖ ಬಲ, ಮಿಯಾಸಮ್‌ಗಳು (ದೀರ್ಘಕಾಲದ ಕಾಯಿಲೆಗಳ ಸಿದ್ಧಾಂತ), ಕೇಸ್-ಟೇಕಿಂಗ್ ವಿಧಾನಗಳು, ಡೋಸೇಜ್ (ಸಾಮರ್ಥ್ಯ ಮತ್ತು ಡೋಸೇಜ್ ಆಯ್ಕೆ), ಮತ್ತು ವಿವಿಧ ತೀವ್ರ ಮತ್ತು ದೀರ್ಘಕಾಲದ ಕಾಯಿಲೆಗಳನ್ನು ನಿರ್ವಹಿಸುವಲ್ಲಿ ಈ ತತ್ವಗಳ ಅನ್ವಯ ಸೇರಿವೆ.ಕ್ಲಿನಿಕಲ್ ಏಕೀಕರಣ: ಸೆಮಿನಾರ್‌ಗಳು, ಗುಂಪು ಚರ್ಚೆಗಳು, ಜರ್ನಲ್ ಕ್ಲಬ್‌ಗಳು ಮತ್ತು ಹೊರರೋಗಿ (OPD) ಮತ್ತು ಒಳರೋಗಿ ವಿಭಾಗಗಳು (IPD) ಎರಡರಲ್ಲೂ ವ್ಯಾಪಕವಾದ ಕೇಸ್ ಸ್ಟಡೀಸ್ ಮೂಲಕ ಕ್ಲಿನಿಕಲ್ ಅಭ್ಯಾಸದೊಂದಿಗೆ ತಾತ್ವಿಕ ತತ್ವಗಳನ್ನು ಸಂಂ-ಯೋಜಿಸುವುದನ್ನು ಈ ಕಾರ್ಯಕ್ರಮವು ಒತ್ತಿಹೇಳುತ್ತದೆ.ಸಂಶೋಧನೆ: ವಿದ್ಯಾರ್ಥಿಗಳು ವೈಜ್ಞಾನಿಕ ವಿಚಾರಣೆ ಮತ್ತು ಸಂಶೋಧನಾ ವಿಧಾನದಲ್ಲಿ ತೊಡಗಿಸಿಕೊಳ್ಳುವ ನಿರೀಕ್ಷೆಯಿದೆ, ಇದಕ್ಕೆ ಹೆಚ್ಚಾಗಿ ಸಂಶೋಧನಾ ಪ್ರಬಂಧದ ಪ್ರಕಟಣೆ ಮತ್ತು ಪ್ರಬಂಧದ ಸಲ್ಲಿಕೆ ಅಗತ್ಯವಿರುತ್ತದೆ. ಎಂಡಿ ಪೂರ್ಣಗೊಳಿಸಿದ ನಂತರ, ಪದವೀಧರರು ಸಮರ್ಥ ತಜ್ಞರು ಅಥವಾ ವೈದ್ಯಕೀಯ ಶಿಕ್ಷಕರಾಗಿ ಕೆಲಸ ಮಾಡಬಹುದು. ವೃತ್ತಿ ಮಾರ್ಗಗಳಲ್ಲಿ ಖಾಸಗಿ ಕ್ಲಿನಿಕಲ್ ಪ್ರಾಕ್ಟೀಸ್, ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ಕೆಲಸ, ಸಾರ್ವಜನಿಕ ಆರೋಗ್ಯ ಉಪಕ್ರಮಗಳು ಮತ್ತು ಹೋಮಿಯೋಪತಿ ಕಾಲೇಜುಗಳು ಮತ್ತು ಸಂಸ್ಥೆಗಳಲ್ಲಿ ಸಂಶೋಧನೆ ಮತ್ತು ಶೈಕ್ಷಣಿಕ ಹುದ್ದೆಗಳು ಸೇರಿವೆ.

## ಸರ್ವರ ಸರ್ವೋದಯ ಕುವೆಂಪು ಸಾಹಿತ್ಯದ ಸಾರ :ಪ್ರೊ. ಸರಿತಾ ಇಂಚೂರ

❏ ನೈಜ್ಯ ದೆಸೆ ನ್ಯೂಸ್

**ಲಿಂಗಸುಗೂರು: ಕುವೆಂಪು ವಿಶ್ವಮಾನವ ಸಂದೇಶದಲ್ಲಿ ಮನುಜಮತ ವಿಶ್ವಪಥ ಸರ್ವೋದಯ ಸಮನ್ವಯ ಪೂರ್ಣದೃಷ್ಟಿ ಪಂಚ ಮಂತ್ರಗಳನ್ನು ಹೇಳುತ್ತಾರೆ. ಆದರೆ ಸರ್ವರ ಸರ್ವೋದಯವೇ ಕುವೆಂಪು ಸಾಹಿತ್ಯದ ಒಟ್ಟು ಸಾರವಾಗಿದೆ ಎಂದು ಲಿಂಗಸುಗೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಸರಿತಾ ಇಂಚೂರ ಹೇಳಿದರು.**



ಪಟ್ಟಣದ ಶ್ರೀ ಉಮಾಮಹೇಶ್ವರಿ ಪದವಿ ಪೂರ್ವ ಕಾಲೇಜು ಹಾಗೂ ತಾಲ್ಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ನಡೆದ ಕುವೆಂಪು ವಿಚಾರಧಾರೆಗಳ ಕು-ರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು ಕುವೆಂಪು ಸಾಹಿತ್ಯ ವ?ಚಾರಿಕ ಪ್ರಜ್ಞೆಯನ್ನು ಮಾನವೀಯ ಮೌಲ್ಯಗಳನ್ನು ಒಟ್ಟೊಟ್ಟಿಗೆ ಬೆಳೆಸುತ್ತದೆ. ಮೌಢ್ಯವನ್ನು ತಿರಸ್ಕ-ರಿಸುವ ಕುವೆಂಪು ವ?ಚಾರಿಕ ಚಿಂತನೆಗಳು ಮಾನವ ಧರ್ಮವನ್ನು ಎತ್ತಿಹಿಡಿಯುತ್ತವೆ. ಹುಟ್ಟುವ ಹಸುಗೂಸು ವಿಶ್ವಮಾನವನಾಗಿ ಹುಟ್ಟಿ ಅದು ಜಾತಿ, ಮತ, ಪಂತಗಳಲ್ಲಿ ಬಂಧಿಯಾಗುತ್ತದೆ. ಈ ಬಂಧನವನ್ನು ಕಳಚಿ ವಿಶ್ವಮಾನವನನ್ನಾಗಿಸುವ ಪ್ರಜ್ಞೆಯೇ ಇಂದಿನ ಶಿಕ್ಷಣದ ಆದ್ಯತೆಯಾಗಬೇಕು ಎನ್ನುವುದು ಕುವೆಂಪು ಅವರ ಒತ್ತಾಸೆಯಾಗಿತ್ತು. ಕುವೆಂಪು ಸಾಹಿತ್ಯದ ಓದಿನಿಂದ ನಮ್ಮಲ್ಲಿರುವ ದಾಸ್ಯಭಾವನೆಯಿಂದ ಬಿಡುಗೊಂಡು ಧರ್ಮಾತೀತವಾಗಿ ಬದುಕುವ ರೀತಿಯನ್ನು ಕಲತುಕೊಳ್ಳಬೇಕೆಂದು ಹೇಳಿದರು. ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿದ ಕಥ-'ಗಾರ ಶರಣಬಸವ ಗುಡದಿನ್ನಿ ಮಾತಾನಾಡಿ ಕುವೆಂಪು ಬಾಲ್ಯ ಅನೇಕ ಸವಾಲುಗಳಿಂದ ಕಳೆದರು. ಪ್ರಕೃತಿಯ ಆರಾಧನೆಯು ಅವರ ಸಾಹಿತ್ಯದ ಆಯಾಮವಾಗಿದ್ದು, ಪ್ರಕೃತಿಯ ಅನುಭೂತಿಯಲ್ಲಿ ಆಧ್ಯಾತ್ಮದ ತುದಿ ತಲುಪಿದರು. ವಿವೇಕಾನಂದ ರಾಮಕೃಷ್ಣರು ಕುವೆಂಪು ಅವರನ್ನು ಪ್ರಭಾವಿಸಿದರು ಎಂದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಶ್ರೀ ಉಮಾಮಹೇಶ್ವರಿ ಸಮೂಹ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶರಣಬಸವ ಗಣಾಚಾರಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಸಾಪ ಅಧ್ಯಕ್ಷ, ಪ್ರಾಚಾರ್ಯ ವೀರೇಶ ಆದೋನಿ ಮಾತನಾಡಿದರು. ಈ ಸಂದರ್ಭದಲ್ಲಿ ಕಸಾಪ ಅಧ್ಯಕ್ಷ ಮಹಾದೇವಪ್ಪ ನಾಗರಹಾಳ, ಕು. ಪಾರ್ವತಿ, ಕಸಾಪದ ಮಹಿಳಾ ಪ್ರತಿನಿಧಿಗಳಾದ ಸವಿತಾ ಗೌಡರ, ಈರಮ್ಮ ಕುಂಬಾರ, ಗೌರವ ಕಾರ್ಯದರ್ಶಿ ಗಂಗಾಧರ ಪತ್ತಾರ, ಸದಸ್ಯ ಹ?ಮದ್ ಖಾದರಬಾಷಾ ಹಾಗೂ ಉಪನ್ಯಾಸಕರು ಇದ್ದರು.

# ಕೃಷಿ, ಪಶುವೈದ್ಯಕೀಯ ಮತ್ತು ಕೃಷಿಗೆ ಸಂಬಂಧಿತ ವಿಷಯಗಳ ಕುರಿತು ಅಂತರಾಷ್ಟ್ರೀಯ ಸಮ್ಮೇಳನ

## ಹತ್ತಿ ಬೆಳೆ ಕ್ಷೇತ್ರದಲ್ಲಿ ಹೊಸ ಸಂಶೋಧನೆ ನಡೆಯಲಿ: ಡಾ.ಶ್ರೀನಿವಾಸ ರಾವ್ ಸಲಹೆ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 29 (ಕರ್ನಾಟಕ ವಾರ್ತೆ): ರಾಯಚೂರು ಜಿಲ್ಲೆಯಲ್ಲಿ ಹತ್ತಿ ಬೆಳೆಯು ಯಥೇಚ್ಛವಾಗಿದ್ದು, ಈ ಭಾಗದ ಹತ್ತಿ ಬೆಳೆಗಾರರಿಗೆ ಅನುಕೂಲವಾಗುವ ರೀತಿಯಲ್ಲಿ ಹೊಸ ಸಂಶೋಧನೆಗಳು ನಡೆಯಬೇಕಿದೆ ಎಂದು ದೆಹಲಿಯ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಶ್ರೀನಿವಾಸ ರಾವ್ ಅವರು ಹೇಳಿದರು.**

ಡಿಸೆಂಬರ್ 29ರ ಸೋಮವಾರ ದಂದು ನಗರದ ಕೃಷಿ ವಿವಿಯ ಜಗಜ್ಯೋತಿ ಬಸವೇಶ್ವರ ಸಭಾಂಗಣದಲ್ಲಿ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಷ್ಟ್ರೀಯ ಕೃಷಿ ಅಭಿವೃದ್ಧಿ ಸಹಕಾರಿ ನಿಯಮಿತ, ಬಾರಾಮುಲ್ಲಾ, ಜಮ್ಮು ಮತ್ತು ಕಾಶ್ಮೀರ ಇವರ ಸಹಯೋಗದಲ್ಲಿ ಮೂರು ದಿನಗಳ ಅವಧಿಯ ಕೃಷಿ, ಪಶುವೈದ್ಯಕೀಯ ಮತ್ತು ಕೃಷಿಗೆ ಸಂಬಂಧಿತ ವಿಷಯಗಳಲ್ಲಿ ಸುಸ್ಥಿರ ನಾವಿನ್ಯತೆಗಳ ಕು-ರಿತಾದ ಅಂತರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ದೇಶದೆಲ್ಲೆಡೆ 2002ರಲ್ಲಿ ಉತ್ತಮವಾಗಿ ಬೆಳೆದು ಭರವಸೆ ಮೂಡಿಸಿದ ಬಿಟಿ ಹತ್ತಿ ತಳಿಯು ಕ್ರಮೇಣ ಕೀಟಬಾಧೆಗೆ ತುತ್ತಾಗಿದ್ದು, ನಾವಿನ್ಯತೆಯ ಮೂಲಕ ಹೊಸ ತಳಿಯನ್ನು ಕಂಡುಹಿಡಿಯಬೇಕಾಗಿದೆ.

ಹತ್ತಿ ಬಿಡಿಸುವಿಕೆಯ ಸಣ್ಣ ಉಪಕರಣಗಳ ತಯಾರಿಕೆ ಹಾಗೂ ಉತ್ತಮ ರೀತಿಯ ಬ್ಯಾಗೇಜ್‌ನ ಅವಶ್ಯಕತೆಯಿದೆ. ಇವೆರಡನ್ನೂ ವಿಶ್ವವಿದ್ಯಾಲಯವು ಪರಿಗಣಿಸಿ ಕ್ರಮವಹಿಸಬೇಕಾಗಿದೆ ಎಂದರು. ನಾವಿನ್ಯತೆ ಎಂದರೆ ಹೊಚ್ಚ-ಹೊಸದು, ಹೆಚ್ಚಿನ ಪ್ರಗತಿ ಹಾಗೂ ನಿರಂತರವಲ್ಲದ್ದನ್ನು ಬಿಟ್ಟು ಪ್ರಸ್ತುತಿಗೆ ಹೊಂದಿಕೊಳ್ಳುವ ಬಗ್ಗೆ ವಿಚಾರ ಮಾಡುವುದಾಗಿದೆ. ಕೃಷಿ ಮತ್ತು ಜಾನುವಾರು ಕೃಷಿ ಕ್ಷೇತ್ರಗಳ ಅಭಿವೃದ್ಧಿಗೆ ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿಗೆ ಸಂಬಂಧಿಸಿದ ಸಂಸ್ಥೆಗಳು ಒತ್ತು ಕೊಡಬೇಕು. ಈ ಬಗ್ಗೆ ರಾಯಚೂ-ರಿನ ಕೃ.ವಿ.ವಿಯು ತನ್ನ ಕೊಡುಗೆಯ ಬಗ್ಗೆ ಪರಾಮರ್ಶಿಸಬೇಕೆಂದು ಕಿವಿಮಾತು ಹೇಳಿದರು. ಮಳೆಮಾರುತ ಮತ್ತು ಮಾರುಕಟ್ಟೆಗಳ ಸಮಸ್ಯೆಗಳತ್ತ ವಿಶ್ವವಿದ್ಯಾಲಯವು ಗಮನಹರಿಸಿ




ರೈತರ ಏಳಿಗೆಗೆ ಸಹಕರಿಸಬೇಕು. ತುಂತುರು ನೀರಾವರಿ, ಫಲೀಕರಣ, ನಿವ್ವಳ ಶೂನ್ಯ ಹೊರಸೂಸುವಿಕೆ ಇತ್ಯಾದಿಗಳ ಬಗ್ಗೆ ಗಮನ ನೀಡಬೇಕು. ಕೊಯ್ಲೋತ್ತರ ನಷ್ಟವು ಕೃಷಿಯ ಅಭಿವೃದ್ಧಿಗೆ ಮಾರಕವಾಗಿದ್ದು, ಶೇ.30 ರಷ್ಟು ಆಹಾರವು ಪ್ರತಿ ವರ್ಷ ನಷ್ಟವಾಗುತ್ತಿದ್ದು, ಇದರ ಬೆಲೆ ವಾರ್ಷಿಕವಾಗಿ 1.3 ಲಕ್ಷ ಕೋಟಿಗಳಷ್ಟಾಗಿರುವುದು ಬೇಸರದ ಸಂಗತಿಯಾಗಿದೆ. ಆದ್ದರಿಂದ ರೈತರೇ ಜೀವಾಳ, ರೈತರಿಲ್ಲದಿದ್ದರೆ ಯಾವುದೇ ಕೃಷಿ ವಿಶ್ವವಿದ್ಯಾಲಯ ಇರುವುದಿಲ್ಲ.

ಇದನ್ನು ಗಮನದಲ್ಲಿಟ್ಟುಕೊಂಡು ನಾವೆಲ್ಲರೂ ರೈತರ ಅಭಿವೃದ್ಧಿಗೆ ಶ್ರಮಿಸಬೇಕೆಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಂ. ಹನುಮಂತಪ್ಪ ಅವರು ವಹಿಸಿ ಮಾತನಾಡಿ, ಈ ವಿಶ್ವವಿದ್ಯಾಲಯವು ರೈತರ ಅಭಿವೃದ್ಧಿಗೆ ಪೂರಕವಾಗಿರುವ ಎಲ್ಲಾ ವ್ಯವಸ್ಥೆಗಳನ್ನು ಹೊಂದಿದ್ದು, ಇಲ್ಲಿ ಅಭಿವೃದ್ಧಿಪಡಿಸಿದ ಹಲವಾರು ತಂತ್ರಜ್ಞಾನಗಳು ರೈತರಿಗೆ ತಲುಪುತ್ತಿವೆ. ಆದಾಗ್ಯೂ ಕೂಡ ಇನ್ನೂ ಹೆಚ್ಚಿನ ರೀತಿಯಲ್ಲಿ ಅಂದರೆ, ಆಹಾರ ಉತ್ಪಾದನೆಯ ಮೌಲ್ಯವರ್ಧನೆ, ಬ್ರ್ಯಾಂಡಿಂಗ್, ಪ್ಯಾಕೆ-ಜಿಂಗ್‌ಗಳಲ್ಲಿ ಪ್ರಗತಿಯನ್ನು ಸಾಧಿಸಬೇಕಾಗಿದೆ.

ವಿಶ್ವವಿದ್ಯಾಲಯದ ಜೈವಿಕ ಉತ್ಪಾದನಾ ಘಟಕ, ಬೀಜ ಘಟಕ, ಪೀಡೆನಾಶಕಗಳ ಅವಶೇಷಗಳ ವಿಶ್ಲೇಷಣಾ ಘಟಕಗಳು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮೆಣಸಿನಕಾಯಿ ಬಾಧಿಸುವ ಬ್ಲಾಯಕ್ ತ್ರಿಪ್ಸ್‌ನ ನಿರ್ವಹಣೆಯಲ್ಲಿ ನಮ್ಮ ವಿಶ್ವವಿದ್ಯಾಲಯದ ಜೈವಿಕ ಉತ್ಪಾದನಾ ಘಟಕದ ಕೊಡುಗೆ ಅಪಾರವಾಗಿದೆ. ಅಂತೆಯೇ ಬೀಜ ಉತ್ಪಾದನಾ ಘಟಕವು ಪ್ರಸ್ತುತ 22,000 ಕ್ವಿಂಟಲ್ ಬೀಜ ಉತ್ಪಾದಿಸಿ ರೈತರಿಗೆ ಮಾರಾಟ ಮಾಡಲಾಗಿದೆ. ಬರುವ ದಿನಗಳಲ್ಲಿ ಸಿರಿಧಾನ್ಯಗಳ ಮೌಲ್ಯವರ್ಧಿತ ಪಾರ್ಕ್ ಕೂಡ ಈ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಯಾಗಲಿದ್ದು, ಸಣ್ಣ ಮತ್ತು ಅತಿಸಣ್ಣ ಸಿರಿಧಾನ್ಯ ಬೆಳೆಗಾರ-ರಿಗೆ ವರದಾನವಾಗಲಿದೆ ಎಂದರು. ವಿಶ್ವವಿದ್ಯಾಲಯವು ಕೃಷಿ ಯಂತ್ರೋಪಕರಣಗಳ ಅಭಿವೃದ್ಧಿ ಹಾಗೂ ಬಳಕೆಗೆ ಮಹತ್ವ ನೀಡಿದ್ದು, ಭತ್ತದಲ್ಲಿ ಭೂಮಿ ತಯಾರಿಕೆಯಿಂದ ಹಿಡಿದು ಕೊಯ್ಲೋತ್ತರದವರೆಗೆ ಬೇಕಾಗುವ ಸಣ್ಣ-ಸಣ್ಣ ಉಪಕರಣಗಳನ್ನು ಅಭಿವೃದ್ಧಿಪಡಿಸಿ ರೈತರ ಬಳಕೆಗೆ ನೀಡಿದೆ. ಕೃಷಿ ತಾಂತ್ರಿಕ ತಂತ್ರಜ್ಞಾನ ಮತ್ತು ಬೆಳೆ ಸಂರಕ್ಷಣೆ ವಿಷಯಗಳಲ್ಲಿ 14 ಪೇಟೆಂಟ್‌ಗಳು ದೊರೆತಿವೆ. ಹಾಗೂ ಕೃಷಿ ತಾಂತ್ರಿಕ ವಿಭಾಗದ 12 ವಿದ್ಯಾರ್ಥಿಗಳು ಗೇಟ್ ಪರೀಕ್ಷೆಯನ್ನು ತೇರ್ಗಡೆ ಮಾಡಿರುವರು ಎಂದು ನೆರೆದಿದ್ದ ಸಮ್ಮೇಳನಾರ್ಥಿಗಳಿಗೆ ತಿಳಿಸಿದರು. ಜಾನುವಾರುಗಳ ಆಹಾರ ಕೊರತೆಯನ್ನು ನೀಗಿಸಲು ಹೈಡ್ರೋಪೋನಿಕ್ ತಂತ್ರಜ್ಞಾನ ಮತ್ತು ಅಝೋಲ್ಲಾಗಳ ಉತ್ಪಾದನೆಗೆ ವಿಶ್ವವಿದ್ಯಾಲಯವು ಒತ್ತು ನೀಡಿದೆ.

ಆದ್ದರಿಂದ, ಕೃಷಿಯೇ ನಮಗೆ ಮೂಲ ಸಂಸ್ಕೃತಿ, ಕೃಷಿ ಇಲ್ಲದಿದ್ದರೆ ಯಾವ ಸಂಸ್ಕೃತಿಯು ಇರಲು ಸಾಧ್ಯವಿಲ್ಲ. ರೈತರೇ ಜೀವಾಳ, ಅವರ ಏಳ್ಗೆಯೆತ್ತ ನಾವೆಲ್ಲರೂ ಸಾಗೋಣ ಎಂದರು.



ಈ ವೇಳೆ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರಾದ ಮಲ್ಲಿಕಾರ್ಜುನ ಡಿ ಅವರು ಮಾತನಾಡಿ, ವಿಶ್ವವಿದ್ಯಾಲಯವು ಹಲವಾರು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದರೂ ಕೂಡ ಅವುಗಳ ಬಳಕೆ ರೈತರ ಮಟ್ಟದಲ್ಲಿ ಬಹಳ ಕಡಿಮೆಯಿದೆ. ಇದರ ಬಗ್ಗೆ ವಿಶ್ವವಿದ್ಯಾಲಯವು ಗಮನಹರಿಸಬೇಕು ಹಾಗೂ ವಿಶ್ವವಿದ್ಯಾಲಯದಲ್ಲಿ ರೈತರಿಗೆ ಬೇಕಾಗಿರುವ ಸಮಗ್ರ ಕೃಷಿ ಮತ್ತು ಸಂಪನ್ನ ಕೃಷಿ ಪ್ರಾತ್ಯಕ್ಷಿಕೆ ತಾಕುಗಳ ಪುನಶ್ಚೇತನವಾಗಬೇಕಾಗಿದೆ ಎಂದರು.

ಈ ವೇಳೆ ಹೈದರಾಬಾದಿನ ಪಿ.ವಿ.ನರಸಿಂಹರಾವ್ ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಪ್ರೊ. ಎಂ. ಕಿಶನ್‌ಕುಮಾರ, ಒಡಿಸ್ಸಾದ ಕೇಂದ್ರಿಯ ಭತ್ತ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ. ಜಿ. ಎ. ಕೆ. ಕುಮಾರ, ಬೀದರ್‌ನ ಪಶುವೈದ್ಯಕೀಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗದ ಡೀನ್‌ರಾದ ಡಾ. ದಿಲೀಪ್ ಕುಮಾರ, ಬಾರಾಮುಲ್ಲಾದ ಡಾ. ಆರ್. ಎ. ಶಾಹ ಅವರು ಮಾತನಾಡಿದರು. ಇದಕ್ಕೂ ಮುಂಚೆ ಅಂತರಾಷ್ಟ್ರೀಯ ಸಮ್ಮೇಳನದ ಆಯೋಜನೆಯ ಉದ್ದೇಶವನ್ನು ಸಮ್ಮೇಳನದ ಆಯೋಜನಾ ಸಂಘಟಕರಾದ ಡಾ.ಜಾಗೃತಿ ಬಿ. ದೇಶಮಾನ್ಯ ಅವರು ಮಂಡಿಸಿದರು. ಅಲ್ಲದೆ ಈ ಸಮ್ಮೇಳನಕ್ಕೆ ಆಗಮಿಸಿದ ಎಲ್ಲಾ ಸಮ್ಮೇಳನಾರ್ಥಿಗಳನ್ನು, ಗಣ್ಯರನ್ನು, ನೆರೆದಿದ್ದ ಎಲ್ಲಾ ಸಭಿಕರನ್ನು ಸ್ವಾಗತಿಸಿದರು. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸದಸ್ಯರುಗಳಾದ ಬಸನಗೌಡ ಬ್ಯಾಗವಾಟ್, ಮಲ್ಲೇಶ ಕೊಲಿಮಿ, ತಿಮ್ಮಪ್ಪ ಸೋಮಪ್ಪ ಚವಡಿ, ಡಾ.ಕೆ.ನಾರಾಯಣ ರಾವ್, ಡಾ. ಜಿ. ಬಿ. ಲೋಕೇಶ್ ಸೇರಿದಂತೆ ವಿಶ್ವವಿದ್ಯಾಲಯದ ಅಧಿಕಾರಿವೃಂದ, ಪ್ರಾಧ್ಯಾಪಕವೃಂದ, ಸ್ನಾತಕೋತ್ತರ ವಿದ್ಯಾರ್ಥಿಗಳು ಇದ್ದರು.

# ಹಾಲುಮತ ಪೂಜಾರಿಗಳಿಗೆ ತರಬೇತಿ, ಸಾಹಿತ್ಯ ಸಮ್ಮೇಳನ

❏ ನೈಜ್ಯ ದೆಸೆ ನ್ಯೂಸ್

**ಸೈದಾಪುರ: ಡಿ 29 'ಪ್ರತಿವರ್ಷದಂತೆ ಈ ವರ್ಷ ಹಾಲುಮತ ಧರ್ಮ ಸಂಸ್ಕೃತಿ ಮತ್ತು ಸಾಹಿತ್ಯ ಸಮ್ಮೇಳನದ ಮೂರು ದಿನಗಳ ರಾಜಕೀಯೇತರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಹೀಗಾಗಿ ಕುರುಬ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು' ಎಂದು ಜಿಲ್ಲಾ ಕುರುಬ ಸಮಾಜದ ಮಾಜಿ ಅಧ್ಯಕ್ಷ ಕೆ.ವಿಶ್ವನಾಥ ಕವಡಿ ನೀಲಹಳ್ಳಿ ತಿಳಿಸಿದರು.**

ಪಟ್ಟಣದ ಕನಕ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಹಾಲುಮತ ಪೂಜಾರಿಗಳಿಗೆ ತರಬೇತಿ ಹಾಗೂ ಹಾಲುಮತ ಸಾಹಿತ್ಯ ಸಮ್ಮೇಳನದ ಅಂಗವಾಗಿ ಭಿತ್ತಿಪತ್ರ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. 'ದೇವದುರ್ಗ ತಾಲ್ಲೂಕಿನ ಕಾಗಿನೆಲೆ




ಮಹಾಸಂಸ್ಥಾನ ಕನಕ ಗುರುಪೀಠ ತಿಂಥ-'ಣಿ ಬ್ರಿಡ್ಜ್‌ನಲ್ಲಿ ಜ.12, 13 ಮತ್ತು 14 ರಂದು ಹಾಲುಮತ ಪೂಜಾರಿಗಳಿಗೆ ತರಬೇತಿ ಹಾಗೂ ಹಾಲುಮತ ಸಾಹಿತ್ಯ ಸಮ್ಮೇಳನ ಆಯೋಜಿಸಲಾಗಿದೆ. ಬೀರದೇವರು, ರೇವಣ್ಣಸಿದ್ದೇಶ್ವರ, ಮೈಲಾರಲಿಂಗೇಶ್ವರ, ಮಾಳಿಂಗರಾಯ, ಅಮೋಘಸಿದ್ದೇಶ್ವರ ದೇವಸ್ಥಾನದ ಪೂಜಾರಿಗಳಿಗೆ ಯಾವುದೇ ಪೂಜಾ ಪದ್ಧತಿ ಗೊತ್ತಿಲ್ಲದ ಕಾರಣ ಭಕ್ತರು ದೇವಸ್ಥಾನಗಳ ಒಡನಾಟ ಬಿಡುತ್ತಿದ್ದಾರೆ. ಅಲ್ಲದೆ ಬೇರೆ ದೇವಸ್ಥಾನಗಳಿಗೆ ಮಾರು ಹೋಗುತ್ತಿದ್ದಾರೆ. ಪೂಜಾರಿಗಳಿಗೆ ಪೂಜಾ ಪದ್ಧತಿ ಮತ್ತು ಮಂತ್ರಗಳನ್ನು ಕಲಿಸುವ ಉದ್ದೇಶದಿಂದ ಈ ವರ್ಷ ಮೂರು ದಿನಗಳ ಕಾಲ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ' ಎಂದು ತಿಳಿಸಿದರು.

ವಿಶೇಷವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರುವ ಕುರುಬ ಸಮುದಾಯದ ಪೂಜಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಸಮುದಾಯದ ಮುಖಂಡರು ತಮ್ಮ ದೇವಸ್ಥಾನದ ಪೂಜಾರಿಗಳನ್ನು ಶಿಬಿರಕ್ಕೆ ಕರೆತರುವ ಸೇವೆ ಮಾಡಬೇಕು. ಅಲ್ಲದೆ ಮೂರು ದಿನಗಳ ಕಾಲ ಹಾಲುಮತ ಧರ್ಮದ ಬಗ್ಗೆ ವಿವಿಧ ದೇವರ, ಸಿದ್ಧ ಪುರುಷರು ಬಗ್ಗೆ ಸಾಹಿತ್ಯ ಸಮಾರಂಭವನ್ನು ಏರ್ಪಡಿಸಲಾಗಿದೆ. ಈ ಸಮಾರಂಭದಲ್ಲಿ ಹಲವು ಪೂಜ್ಯರು, ಸಂಶೋಧಕರು, ಉಪನ್ಯಾಸಕರು, ಕಲಾವಿದರು, ಆಗಮಿಸುತ್ತಿದ್ದಾರೆ. ಹೀಗಾಗಿ ಭಕ್ತರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು' ಎಂದರು.

ಈ ಸಂದರ್ಭದಲ್ಲಿ ಸಮುದಾಯದ ಹಿರಿಯ ಮುಖಂಡರಾದ ಚಂದ್ರಶೇಖರ ವಾರಾದ, ಭೀಮಶಪ್ಪ ಜೇಗರ್, ವಲಯಾಧ್ಯಕ್ಷ ರವಿ ಕುಮಾರ್ ಕಡೇಚೂರು , ಸಿದ್ದುಪೂಜಾರಿ ಬದ್ದೇಪಲ್ಲಿ, ಪರಮೇಶ್ ವಾರದ, ವಿಜಯ ಕಂದಳ್ಳಿ , ಭೀಮಪ್ಪ ಬಾಲಚೇಡ, ಸಿದ್ರಾಮಪ್ಪ ಜೇಗರ, ಸೇರಿದಂತೆ ಇತರರಿದ್ದರು.

# ಜಿಲ್ಲೆಗೆ ವಿಭಾಗ ಮಟ್ಟದಲ್ಲಿ ಪ್ರಥಮ ಸ್ಥಾನ

❏ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ 2024-25ನೇ ಸಾಲಿನ ಜಿಲ್ಲೆಯ ಸಮಗ್ರ ಚಟುವಟಿಕೆಗಳ ಅಭಿವೃದ್ಧಿಯನ್ನು ಪರಿಗಣಿಸಿ ರಾಯಚೂರು ಜಿಲ್ಲೆಗೆ ಕಲಬುರಗಿ ವಿಭಾಗೀಯ ಮಟ್ಟದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿರುವುದಕ್ಕೆ ಪ್ರೊ.ಕೆ ಶಿವಶಂಕರ್ ಪರ್ಯಾಯ ಪಾರಿತೋಷಕ ಪ್ರಶಸ್ತಿಯನ್ನು ಮಾನ್ಯ ಶ್ರೀ ಪಿ.ಜಿ.ಆರ್ ಸಿಂಧ್ಯ ರಾಜ್ಯ ಮುಖ್ಯ ಆಯುಕ್ತರು ಇವರು ನೀಡಿ ಗೌರವಿಸಿದರು.**



ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಬಸವರಾಜ ಗದಗಿನ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀಮತಿ ರಾಜಶ್ರೀ ಸಜ್ಜನ್ ಜಂಟಿ ಕಾರ್ಯದರ್ಶಿಗಳು (ಗೈ), ಶ್ರೀಮತಿ ರಜನಿ.ಡಿ ರಾಜ್ಯ ಪರಿಷತ್ ಸದಸ್ಯರು (ಗೈ), ಶ್ರೀ ಬೀರಪ್ಪ ಶಂಭೋಜಿ ಸಹಾಯಕ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಮಲ್ಲಪ್ಪ ಕುಂಬಾರ ಸಹಾಯಕ ಜಿಲ್ಲಾ ಆಯುಕ್ತರು ಇವರು ಪ್ರಶಸ್ತಿಯನ್ನು ಸ್ವೀಕರಿಸಿದರು.

# ಜೀವಮಾನ ಸಾಧನೆ, ವಿಶಿಷ್ಟ ಸೇವಾ ಪ್ರಶಸ್ತಿಗಳ ಪ್ರದಾನ-ವೈಜ್ಞಾನಿಕ ಸಮ್ಮೇಳನ

❏ ನೈಜ್ಯ ದೆಸೆ ನ್ಯೂಸ್

**ಮೈಲಾಪುರ ಅಗಸಿಯಲ್ಲಿ ಭಾನುವಾರ ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ 5ನೇ ರಾಜ್ಯ ಮಟ್ಟದ ವೈಜ್ಞಾನಿಕ ಸಮ್ಮೇಳನ ಅಧ್ಯಕ್ಷರ ಮೆರವಣಿಗೆಗೆ ಚಾಲನೆ ನೀಡಲಾಯಿತು. ಅಲಂಕೃತವಾದ ಸಾರೋಟ ಮಾದರಿಯ ತೆರೆದ ವಾಹನದಲ್ಲಿ ಸಮ್ಮೇಳನ ಅಧ್ಯಕ್ಷ ವಿಶ್ವಾರಾಧ್ಯ ಸತ್ಯಂಪೇಟೆ, ಅವರೊಂದಿಗೆ ಪತ್ನಿ ಹಾಗೂ ಪರಿಷತ್ತಿನ ಸಂಸ್ಥಾಪಕ ಅಧ್ಯಕ್ಷ ಹುಲಿಕಲ್ ನಟರಾಜ್ ಅವರು ಆಸಿನರಾದರು.**

ಗುರುಮಠಕಲ್ ಖಾಸಾಮಠದ ಶಾಂತವೀರ ಗುರುಮುರುಘಾರಾಜೇಂದ್ರ ಸ್ವಾಮೀಜಿ ಹಾಗೂ ಚಿಗರಹಳ್ಳಿಯ ಮರುಳ ಶಂಕರಪೀಠದ ಸಿದ್ಧಬಸವ ಕಬೀರಾನಂದ ಸ್ವಾಮೀಜಿ ಅವರು ಮೆರವಣಿಗೆಗೆ ಚಾಲನೆ ನೀಡಿದರು. ಡೊಳ್ಳು ಕುಣಿತ, ಹಲಗೆ ವಾದನ, ಬ್ಯಾಂಡ್ ಬಾಜಾ



ಮತ್ತಿತರೆ ವಾದ್ಯ ಮೇಳಗಳೊಂದಿಗೆ ಮೆರವಣಿಗೆ ಸಾಗಿತು. ತಲೆಯ ಮೇಲೆ ಬಿಂದಿಗೆ ಹೊತ್ತು, ಸಾಂಪ್ರದಾಯಿಕ ಧಿರಿಸಿನಲ್ಲಿ ಲಂಬಾಣಿ ಕಲಾವಿದರು ಹಲಗೆ ವಾದನಕ್ಕೆ ನೃತ್ಯ ಮಾಡುತ್ತಾ ಸಾಗಿದರು. ಸಮ್ಮೇಳನ ಅಧ್ಯಕ್ಷರು ಬಸವಣ್ಣನ ಭಾವಚಿತ್ರವನ್ನು ಹಿಡಿದು ಕುಳಿತರು.

ಸ್ವಲ್ಪ ದೂರ ಸಾಗುತ್ತಿದ್ದಂತೆ ಸಂಘಟಕರು ಬುದ್ಧ, ಬಸವ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ಅವರು ಒಟ್ಟಾಗಿರುವ ಫೋಟೊವನ್ನು ನೀಡಿದರು. ಮೂವರು ಮಹನೀಯರ ಫೋಟೊವನ್ನು ಹಿಡಿದು



ಮೆರವಣಿಗೆಯಲ್ಲಿ ಸಾಗಿದರು. ಮಾರ್ಗ ಮಧ್ಯದಲ್ಲಿ ಸಮ್ಮೇಳನ ಅಧ್ಯಕ್ಷರ ಆಪ್ತರು, ಬೆಂಬಲಿಗರು ಸನ್ಮಾನಿಸಿ ಅಭಿನಂದನೆಯೂ ಸಲ್ಲಿಸಿದರು. ಶಾಲೆಯ ಮಕ್ಕಳು, ಶಿಕ್ಷಕರು, ಆಶಾ ಕಾರ್ಯಕರ್ತೆಯರು, ಸಮ್ಮೇಳನದ ಸಂಘಟಕರು, ಸ್ವಯಂ ಸೇವಕರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು. ಮೆರವಣಿಗೆಯು ಮೈಲಾಪುರ ಅಗಸಿಯಿಂದ ಹೊರಟು ದುರ್ಗಾ ದೇವಿ ದೇವಸ್ಥಾನ ಪ್ರವೇಶದ್ವಾರ, ಛತ್ರಪತಿ ಶಿವಾಜಿ ಸರ್ಕಲ್, ಗಾಂಧಿ ವೃತ್ತ ಮೂಲಕ ಹಾದು ವೀರಶೈವ ಕಲ್ಯಾಣ ಮಂಟಪ ಮುಂಭಾಗದಲ್ಲಿ ಸಂಪನ್ನಗೊಂಡಿತು.

ಮೆರವಣಿಗೆಯಲ್ಲಿ ನಗರಸಭೆ ಮಾಜಿ ಅಧ್ಯಕ್ಷೆ ಲಲಿತಾ ಅನಪುರ, ಪರಿಷತ್ತಿನ ಜಿಲ್ಲಾಧ್ಯಕ್ಷ ಗುಂಡಪ್ಪ ಕಲಬುರಗಿ, ಮುಖಂಡರಾದ ವಿಶ್ವಾನಾಥ ಸಿರವಾರ, ಮರೆಪ್ಪ ಚಟ್ಟರಕಿ, ಭೀಮಣ್ಣ ಮೇಟಿ, ಹಣುಮೇಗೌಡ ಮರಕಲ್, ಎ.ಸಿ. ಕಾಡ್ಲೂರ್, ಭೀಮರಾವ ಲಿಂಗೇರಿ, ಎಸ್.ಎಸ್. ನಾಯಕ, ರವೀಂದ್ರ ಶಾಬಾದಿ, ಶಿವರಂಜನ್ ಸತ್ಯಂಪೇಟೆ, ಅಶೋಕ ದೊಡ್ಡಮನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಯಾದಗಿರಿಯಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ 5ನೇ ವೈಜ್ಞಾನಿಕ ಸಮ್ಮೇಳನ ಅಧ್ಯಕ್ಷರ ಮೆರವಣಿಗೆಯಲ್ಲಿ ನೃತ್ಯದ ಮಾಡಿದ ಲಂಬಾಣಿ ಕಲಾವಿದರು